ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂಪುಟ 13 ಸಂಚಿಕೆ 5 ಮೇ 2016 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಆಗಸ್ಟ್ 2010ರ ಸಂಚಿಕೆ)

ನಮಗೆ ನಮ್ಮ ಬದುಕಿನ ಪಥವನ್ನು ಬದಲಿಸಲು ಸಾಧ್ಯವಿಲ್ಲ, ಅದರಲ್ಲೂ ವಿಶೇಷವಾಗಿ, ಅದು ನಮ್ಮ ಜೀವಿತೋದ್ದೇಶವನ್ನು ಪೂರೈಸುತ್ತದೆ ಎಂದು ನಮಗೆ ತಿಳಿದಿದ್ದರೆ. ಪ್ರತಿಯೊಬ್ಬರಿಗೂ ಒಂದು ಉದ್ದೇಶವಿರುತ್ತದೆ.

ತನ್ನ ಜೀವಿತೋದ್ದೇಶದ ಅರಿವಿಲ್ಲದೆ ಒಬ್ಬ ವ್ಯಕ್ತಿ ಇಡೀ ಜೀವಮಾನವನ್ನೇ ಕಳೆಯಬಹುದು. ನಮ್ಮ ಜೀವಿತೋದ್ದೇಶವನ್ನು ನಮಗೆ ಯಾರೂ ಹೇಳುವುದಿಲ್ಲ. ನಾವೇ ಅದನ್ನು ಹುಡುಕಿಕೊಳ್ಳಬೇಕು. ನಮ್ಮೊಳಗೆ ಹುಡುಕಬೇಕು. ನಮ್ಮ ಅಂತರ್ಬೋಧೆಯಿಂದ ಹುಡುಕಬೇಕು.

ಇಲ್ಲಿ ಜನ್ಮ ತಾಳುವ ಮೊದಲೇ ನಾವು ಉದ್ದೇಶವನ್ನು ಆಯ್ಕೆ ಮಾಡಿಕೊಂಡಿರಬಹುದು. ನಮ್ಮ ಇಚ್ಛಾಶಕ್ತಿಯಿಂದ ಆಯ್ಕೆ ಮಾಡಿರಬಹುದು. ಆಯ್ಕೆ ಮಾಡಿಕೊಂಡ ಮೇಲೆ ಅದನ್ನು ಪೂರೈಸಬೇಕು. ನಾವು ಪೂರೈಸದಿದ್ದರೆ ಯಾರೂ ನಮ್ಮನ್ನು ಆಕ್ಷೇಪಿಸುವುದಿಲ್ಲ. ಆದರೆ ಅದು ನಮ್ಮದೇ ಅಧ್ಯಾತ್ಮದ ವೈಫಲ್ಯವಾಗುತ್ತದೆ.

ಉದ್ದೇಶವನ್ನು ಪೂರೈಸುವ ಪಥ ಯಾವಾಗಲೂ ಸುಲಭವಾದದ್ದೇನಾಗಿರುವುದಿಲ್ಲ. ಅದು ಬಹಳ ಕಷ್ಟದ್ದೂ ಆಗಿರಬಹುದು. ಆದರೂ ನಾವದನ್ನು ಗುರಿಯಾಗಿಟ್ಟುಕೊಂಡು ಮುಂದುವರಿಯಬೇಕು. ನಾವು ನಮ್ಮ ಪಥವನ್ನು ಬದಲಿಸಿದರೆ ಯಾರೂ ನಮ್ಮನ್ನು ಆಕ್ಷೇಪಿಸುವುದಿಲ್ಲ. ವಿಶ್ವವ್ಯಾಪಿ ಬುದ್ಧಿಶಕ್ತಿಯು ನಮಗೆ ನೆರವಾಗಲೆಂದು ನಮ್ಮ ಜೀವನದ ಉಸ್ತುವಾರಿ ಮಾಡುತ್ತಿರುತ್ತದೆ; ನಮ್ಮನ್ನು ಆಕ್ಷೇಪಿಸಲಲ್ಲ. ನಾವು ಮಾರ್ಗದರ್ಶನ ಬಯಸಿದರೆ, ಅದು ನೀಡುತ್ತದೆ. ನಾವು ನೆರವು ಕೇಳಿದರೆ ಅದು ನೆರವು ನೀಡುತ್ತದೆ. ಆದರೆ ಅದು ನಮ್ಮ ಜೀವನದ ಪಥವನ್ನು ನಿಯಂತ್ರಿಸುವುದಿಲ್ಲ. ನಾವು ಆಯ್ಕೆ ಮಾಡುತ್ತೇವೆ. ತಪ್ಪೋ ಸರಿಯೋ, ಯಾವಾಗಲೂ ನಾವೇ ಆಯ್ಕೆ ಮಾಡುವುದು.

ಜಗತ್ತಿನ ಬೆಳಕಿನ ಮಾಸ್ಟರ್‌ಗಳೆಲ್ಲ ಒಂದಾಗಬೇಕು. ನಾವೆಲ್ಲ ಒಂದಾಗಿ ನಮ್ಮ ಅಧ್ಯಾತ್ಮ ಜ್ಞಾನವನ್ನು ಹಂಚಿಕೊಂಡಾಗ ಮಾತ್ರ ಮುಂದಿನ ದಾರಿ ಸ್ಪಷ್ಟವಾಗಿ ಗೋಚರಿಸುತ್ತದೆ. ನವಯುಗಕ್ಕೆಡೆ ಮಾಡಿಕೊಡುವ ಈ ಕಷ್ಟಕರ ಸಮಯವನ್ನು ಸುಲಭವಾಗಿ ದಾಟಲು ಸಾಧ್ಯ ಮಾಡಿಕೊಡಲು ಪ್ರತಿಯೊಬ್ಬ ಮಾಸ್ಟರ್ ಬಳಿಯಲ್ಲೂ ಅಧ್ಯಾತ್ಮ ಜ್ಞಾನದ ಸಂಗ್ರಹವಿರುತ್ತದೆ, ಅಧ್ಯಾತ್ಮದ ಸಮಸ್ಯೆಗಳಿಗೆ ಅವರದೇ ಆದ ಪರಿಹಾರಗಳಿರುತ್ತವೆ, ಮಾರ್ಗಸೂಚಿಗಳಿರುತ್ತವೆ, ಸಲಹೆಗಳಿರುತ್ತವೆ. ಇವೆಲ್ಲವೂ ಅವರವರ ಅನುಯಾಯಿಗಳನ್ನು ನಡೆಸಿಕೊಂಡು ಹೋಗಲು ಸಾಕಷ್ಟು ಯೋಗ್ಯವಾಗಿರಬಹುದು. ಆದರೆ ಇಡೀ ಜಗತ್ತನ್ನು ಮುನ್ನಡೆಸಲು ಅವು ಸಾಲದೆ ಹೋಗಬಹುದು. ಆಗ ನಾವೆಲ್ಲರೂ ಒಂದುಗೂಡಿ ಒಂದು ಜಾಗತಿಕ ಅಧ್ಯಾತ್ಮ ವ್ಯವಸ್ಥೆಯನ್ನು ಹುಟ್ಟುಹಾಕಬೇಕಾಗುತ್ತದೆ; ಜಾಗತಿಕ ಮೌಲ್ಯ ವ್ಯವಸ್ಥೆಯನ್ನು ಹುಟ್ಟುಹಾಕಬೇಕಾಗುತ್ತದೆ. ಅದಕ್ಕಾಗಿ ನಾವೆಲ್ಲರೂ ಒಂದಾಗಬೇಕು.

ಎಲ್ಲರೂ ಒಂದಾಗಿ ಮನುಕುಲವನ್ನು ಮುನ್ನಡೆಸುವ ಕಾಲ ಇದೀಗ ಬಂದಿದೆ.

ಅಮರರವರು ಜಗತ್ತಿನ ಅಧ್ಯಾತ್ಮ ಸಮಸ್ಯೆಗಳಿಗೆ ಏಕೀಕೃತ ವಿಧಾನದ ಕನಸನ್ನು ಕಂಡಿದ್ದರು. ಹಿಂದಿನ ಕಾಲಚಕ್ರದಲ್ಲಿ, ಸಹಸ್ರಾರು ವರ್ಷಗಳ ಹಿಂದೆ, ಇಡೀ ಜಗತ್ತಿಗೆ ಒಂದೇ ಅಧ್ಯಾತ್ಮ ವ್ಯವಸ್ಥೆ ಹಾಗೂ ಒಂದೇ ಮೌಲ್ಯ ವ್ಯವಸ್ಥೆ ಇತ್ತು. ಒಂದು ಕಾಲದಲ್ಲಿ 13 ಶತಕೋಟಿ ಜನರು ಎಲ್ಲವನ್ನೂ ಪ್ರೀತಿಯಿಂದ ಹಂಚಿಕೊಳ್ಳುತ್ತ ಸುಖಶಾಂತಿಯಿಂದಿದ್ದರು. ಆಗ ಯಾವ ಕೊರತೆಯೂ ಇರಲಿಲ್ಲ, ಯಾವ ಸಮಸ್ಯೆಯೂ ಇರಲಿಲ್ಲ.

ಇಂತಹ ವಿಷಯಗಳನ್ನು ನಂಬಲು ಕಷ್ಟವಾಗಬಹುದು. ಆದರೆ ಅಮರರವರು ಆ ಕಾಲದಲ್ಲಿದ್ದರು ಮತ್ತು ಅದನ್ನು ನೆನಪಿಟ್ಟಿದ್ದರು. ಅವರು ನಮಗೆ ಹೇಳಿದ್ದರು, "ಆಗ ನೀವೂ ನನ್ನೊಂದಿಗಿದ್ದಿರಿ. ಆದರೆ ನಿಮಗೀಗ ಅದರ ನೆನಪಾಗುತ್ತಿಲ್ಲ."

ಬೆಳಕಿನ ಯುಗದಲ್ಲಿ ನಾವು ಮುಂದುವರಿಯುತ್ತಿದ್ದಂತೆ ಹಾಗೂ ನಮ್ಮ ಗ್ರಹಣ ಶಕ್ತಿಗಳು ಮತ್ತೆ ತೆರೆದುಕೊಳ್ಳುತ್ತಿದ್ದಂತೆ ನಮಗೆ ನೆನಪಾಗಬಹುದು.

ಬೆಳಕಿನ ಯುಗ ಬರುವ ಮೊದಲು ಈ ಭ್ರಷ್ಟಾಚಾರ, ಹಿಂಸಾಚಾರಗಳ ಹೊಲಸನ್ನು ಸ್ವಚ್ಛಗೊಳಿಸಬೇಕಾಗುತ್ತದೆ. ಅದಕ್ಕಾಗಿ ನಾವು ಧ್ಯಾನ ಮಾಡಿ ಬೆಳಕನ್ನು ಚಾನಲ್ ಮಾಡಬೇಕಾಗುತ್ತದೆ. ಅಧ್ಯಾತ್ಮ ಮಟ್ಟದಲ್ಲಿ ಕೆಲಸವಾಗಲು ಬೆಳಕಿನ ಮಾಸ್ಟರ್‌ಗಳೆಲ್ಲ ಒಂದಾಗಿ ಮಾರ್ಗದರ್ಶಿಸಬೇಕಾಗುತ್ತದೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)
**ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ**
**ಮಂಗಳವಾರ** (ಮಧ್ಯಾಹ್ನ 12 ರಿಂದ 1 ಘಂ.)
ಶ್ರೀ ಮಂಜುನಾಥ ಶಾಸ್ತ್ರಿಯವರ ಮನೆ,
ಗಾಂಧಿ ವೃತ್ತ

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಕಾಸ್ಮಿಕ್ ಟವರ್‌ಗೆ ಹೊಂಬಣ್ಣದ ಹಾಸು ಬಿಲ್ಲೆಗಳನ್ನು(tiles) ಹೊದಿಸಲಾಗುತ್ತಿದೆ.
ದುರಸ್ತಿ ಮಾಡಿದ ನಂತರ ಯುಟಿಲಿಟಿ ಬ್ಲಾಕ್‌ಗೆ ಹೊಸದಾಗಿ ಬಣ್ಣದ ಲೇಪನ ಮಾಡಲಾಗುತ್ತಿದೆ.

## ಸುದ್ದಿ-ಸೂಚನೆ

- 22-5-2016 ರಂದು ತಪೋನಗರದಲ್ಲಿ ಗುರೂಜಿಯವರ 77ನೇ ಹುಟ್ಟುಹಬ್ಬದ ವಾರ್ಷಿಕೋತ್ಸವವನ್ನು ಆಚರಿಸಲಾಗುವುದು. ಇದರಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಹೆಸರನ್ನು ದಿನಾಂಕ 20-5-2016 ರೊಳಗೆ ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬಹುದು.
- ಆನೇಕಲ್‌ನಲ್ಲಿರುವ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದ 8ನೇ ವಾರ್ಷಿಕೋತ್ಸವವನ್ನು 11-4-2016 ರಂದು ಆಚರಿಸಲಾಯಿತು.
- ಏಪ್ರಿಲ್ 12ರಂದು ಮಧ್ಯಾಹ್ನ 12 ಗಂಟೆಗೆ ಆನೇಕಲ್ ಪಟ್ಟಣದ ಗಾಂಧಿ ವೃತ್ತದಲ್ಲಿರುವ ಶ್ರೀ ಮಂಜುನಾಥ ಶಾಸ್ತ್ರಿಯವರ ಮನೆಯಲ್ಲಿ ಪ್ರಾರಂಭಗೊಂಡ ಧ್ಯಾನತರಗತಿಯ ಮೊದಲದಿನದ ಸಣ್ಣ ಕಾರ್ಯಕ್ರಮದಲ್ಲಿ ಸುಮಾರು 40 ಜನ ಸೇರಿದ್ದರು. ಇಲ್ಲಿ ಧ್ಯಾನದ ತರಗತಿಗಳನ್ನು ಪ್ರತಿ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಡೆಸಲಾಗುವುದು.
- ನಮ್ಮ ಸಾಧಕರಿಗೆ ತಪೋನಗರದಲ್ಲಿ ಓರಿಯಂಟೇಶನ್ ತರಗತಿಯನ್ನು ದಿನಾಂಕ 04-05-2016, ಬುಧವಾರದಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ನಡೆಸಲಾಗುವುದು. ವೆಬ್‌ಕಾಸ್ಟ್ ವ್ಯವಸ್ಥೆಯನ್ನು ಹೊಂದಿರುವ ದೂರಕಲಿಕೆಯ ಸಾಧಕರು ಕೂಡಾ ಇದರ ನೇರಪ್ರಸಾರದಲ್ಲಿ ಭಾಗವಹಿಸಬಹುದು. ಆಸಕ್ತರು ಮಾನಸ ಆಫೀಸನ್ನು ಸಂಪರ್ಕಿಸಿ ದಿನಾಂಕ 30-04-2016ರ ಮೊದಲು ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬೇಕಾಗಿ ವಿನಂತಿ.

### ಆನೇಕಲ್ ಕಾರ್ಯಕ್ರಮ

18-5-2016 ರಂದು ಬೆಳಿಗ್ಗೆ 11.30 ಘಂಟೆಗೆ ಆನೇಕಲ್‌ನ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ಗುರೂಜಿಯವರ ಹುಟ್ಟುಹಬ್ಬದ ವಾರ್ಷಿಕೋತ್ಸವವನ್ನು ಆಚರಿಸಲಾಗುವುದು.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 05 | ಗುರು | ಮಾಸಶಿವರಾತ್ರಿ |
| 06 | ಶುಕ್ರ | ಅಮಾವಾಸ್ಯೆ |
| 09 | ಸೋಮ | ಅಕ್ಷಯ ತೃತೀಯ |
| 14 | ಶನಿ | ಶುಕ್ಲ ಅಷ್ಟಮಿ |
| 16 | ಸೋಮ | ಶುಕ್ಲ ದಶಮಿ |
| 18 | ಬುಧ | ಗುರೂಜಿಯವರ ಹುಟ್ಟುಹಬ್ಬ |
| 21 | ಶನಿ | ಪೂರ್ಣಿಮಾ ಬುದ್ಧಪೂರ್ಣಿಮಾ |
| 22 | ಭಾನು | ಗುರೂಜಿಯವರ ಹುಟ್ಟುಹಬ್ಬ ಕಾರ್ಯಕ್ರಮ |
| 29 | ಭಾನು | ಕೃಷ್ಣ ಅಷ್ಟಮಿ |

### ಈ ತಿಂಗಳು ತಪೋನಗರದಲ್ಲಿ

ಭಾನುವಾರಗಳು: ಉಪನ್ಯಾಸಗಳು: ಬೆಳಿಗ್ಗೆ 11-12
ಲೈಟ್ ಚಾನಲಿಂಗ್: ಮಧ್ಯಾಹ್ನ 12-1

| | |
|---|---|
| 08-05-2016 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 15-05-2016 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 22-05-2016 | ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮ. |
| 29-05-2016 | ಅಖಂಡ ಧ್ಯಾನ (ಲೈಟ್ ಚಾನಲಿಂಗ್) : ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 |

### ಗುರೂಜಿಯವರ ಹುಟ್ಟುಹಬ್ಬದ ವಾರ್ಷಿಕೋತ್ಸವ ಕಾರ್ಯಕ್ರಮ

**ಭಾನುವಾರ, 22-05-2016**

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ವರ್ಷಾ ದೀಪಕ್**

ನಾನು ಶಾಲೆಯಲ್ಲಿ ಮತ್ತು ಮನೆಯಲ್ಲಿ, ಎರಡೂ ಕಡೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತೇನೆ. ಬೆಳಕು ನನ್ನೊಳಗೆ ಪ್ರವೇಶಿಸುವುದು ನನ್ನ ಅನುಭವಕ್ಕೆ ಬರುತ್ತದೆ. ಹಾಗೂ ಈ ಬೆಳಕನ್ನು ಉಪಯೋಗಿಸಿಕೊಂಡು ನನ್ನ ಜೀವನದ ಗುರಿಯನ್ನು ತಲುಪಬಹುದೆಂದು ನನಗನಿಸುತ್ತದೆ. ಈ ತಂತ್ರವನ್ನು ನನ್ನ ಹೆತ್ತವರು ಮತ್ತು ಸಹೋದರಿಯೊಂದಿಗೆ ಹಂಚಿಕೊಂಡಿದ್ದೇನೆ. ಇದು ಮನಸ್ಸನ್ನು ಉತ್ತಮಗೊಳಿಸುತ್ತದೆ ಹಾಗೂ ಆರೋಗ್ಯಕ್ಕೂ ಒಳ್ಳೆಯದು.

– ಮನೋಜ್ ಎಂ., 8ನೇ ತರಗತಿ, ಬಸವೇಶ್ವರ ಪ್ರೌಢಶಾಲೆ, ಬೆಂಗಳೂರು

ಬೆಳಕು ನನ್ನ ಶರೀರವನ್ನು ಪ್ರವೇಶಿಸುವಾಗ ನಾನೊಂದು ಪ್ರಕಾಶಮಾನವಾದ ಬೆಳಕಿನ ಮಹಾಸಾಗರವೆಂಬ ಅನುಭವ ನನಗಾಗುತ್ತದೆ. ಇದನ್ನು ಅಭ್ಯಾಸ ಮಾಡಿ, ನಾನು ಉತ್ತಮ ಏಕಾಗ್ರತೆಯನ್ನು ಬೆಳೆಸಿಕೊಂಡಿದ್ದೇನೆ. ನನ್ನಲ್ಲಿ ಅನೇಕ ಬದಲಾವಣೆಗಳಾಗಿವೆ. ಈ ಧ್ಯಾನವನ್ನು ನಾನು ಇಷ್ಟಪಡುತ್ತೇನೆ.

– ಧ್ರುವ್, 9ನೇ ತರಗತಿ, ಬಸವೇಶ್ವರ ಪ್ರೌಢಶಾಲೆ, ಬೆಂಗಳೂರು

ಲೈಟ್ ಚಾನಲಿಂಗ್ ಮಾಡುವಾಗ ಮತ್ತು ಇಡೀ ಭೂಮಿಗೆ ಬೆಳಕನ್ನು ಹರಡುವಾಗ, ಬೆಳಕು ನನ್ನೊಳಗೆ ಪ್ರವೇಶಿಸುತ್ತಿರುವುದರ ಅನುಭವ ನನಗಾಗುತ್ತದೆ. ನನ್ನ ವಿದ್ಯಾಭ್ಯಾಸದಲ್ಲಿ ನನಗೆ ಸಹಾಯ ಮಾಡಲು ಮತ್ತು ಉತ್ತಮ ಆರೋಗ್ಯವನ್ನು ನೀಡಲು ನಾನು ಬೆಳಕನ್ನು ಪ್ರಾರ್ಥಿಸಿದೆ. ನನ್ನ ವೈಯಕ್ತಿಕ ಭಾವನೆಗಳನ್ನು, ನನ್ನ ವೈಯಕ್ತಿಕ ವಿಷಯಗಳನ್ನು ಮತ್ತು ನನ್ನ ಸಮಸ್ಯೆಗಳನ್ನು ಕೂಡಾ ಬೆಳಕಿನೊಂದಿಗೆ ಹಂಚಿಕೊಳ್ಳುತ್ತೇನೆ.

– ಶ್ವೇತಾ ವಿ., 6ನೇ ತರಗತಿ, ಶ್ರೀ ಸಾಯಿ ಪಬ್ಲಿಕ್ ಶಾಲೆ, ಬೆಂಗಳೂರು

ಇದೊಂದು ಅತ್ಯುತ್ತಮವಾದ ಅನುಭವ ಮತ್ತು ಈ ದೈವೀ ಬಿಳಿ ಬಣ್ಣದ ಬೆಳಕು ನನಗೆ ಅತ್ಯಂತ ಸಂತೋಷವನ್ನು ಹಾಗೂ ವಿಶ್ರಾಂತಿಯನ್ನು ಉಂಟುಮಾಡಿತು. ನಾನಿದನ್ನು ಇಷ್ಟಪಟ್ಟೆ ಹಾಗೂ ಈ ಪ್ರಪಂಚವು ಶಾಂತಿ ಮತ್ತು ಪ್ರೀತಿಯಿಂದ ತುಂಬಿರುತ್ತದೆಯೆಂಬ ಭರವಸೆಯುಂಟಾಗಿದೆ. ಹಾಗೂ ನಾನು ಕೂಡಾ ಈ ಸಮಾಜದಲ್ಲಿ ಒಬ್ಬ ಉತ್ತಮ ವ್ಯಕ್ತಿಯಾಗಬೇಕೆಂದು ಬಯಸುತ್ತೇನೆ.

– ಸ್ನೇಹಾ, 8ನೇ ತರಗತಿ, ಶ್ರೀ ಸಾಯಿ ಪಬ್ಲಿಕ್ ಶಾಲೆ, ಬೆಂಗಳೂರು

ಲೈಟ್ ಚಾನಲಿಂಗ್ ನಂತರ ನನಗೆ ಬಹಳ ಶಾಂತತೆಯ ಅನುಭವವಾಯಿತು. ಆ ದಿನದಿಂದ ನನ್ನ ಯೋಚನೆಯು ಸಕಾರಾತ್ಮಕವಾಗಿದೆ. ಬೆಳಕನ್ನು ಪ್ರಾರ್ಥಿಸುವುದರಿಂದ ನನ್ನ ಸಮಸ್ಯೆಗಳನ್ನು ಪರಿಹರಿಸಲು ಶಕ್ತಿ ದೊರೆಯುತ್ತದೆ ಮತ್ತು ಅದು ನನ್ನನ್ನು ನಿಶ್ಚಿಂತಳನ್ನಾಗಿ ಮಾಡಿದೆ. ನಾನು ಬೆಳಕನ್ನು ಹರಡುವಾಗ ಪ್ರೀತಿ, ಸ್ನೇಹ, ಸಕಾರಾತ್ಮಕ ಆಲೋಚನೆ ಮತ್ತು ಗೌರವವನ್ನು ಇಡೀ ಪ್ರಪಂಚಕ್ಕೆ ಹರಡುತ್ತೇನೆ.

– ರಕ್ಷಿತಾ ಎಸ್., 9ನೇ ತರಗತಿ, ಶ್ರೀ ಸಾಯಿ ಪಬ್ಲಿಕ್ ಶಾಲೆ, ಬೆಂಗಳೂರು

ಚಾನಲಿಂಗ್ ಮಾಡುವ ಸಂದರ್ಭದಲ್ಲಿ ಬೆಳಕು ನನ್ನ ಶರೀರದ ಮೂಲಕ ಹರಡುವಾಗ, ನಾನು ಬೆಳಕಿನಲ್ಲಿರುವ ಪ್ರೀತಿ ಮತ್ತು ಶಾಂತಿಯನ್ನು ಅನುಭವಿಸಿದೆ.

– ಮನೋಜ್ ಎಲ್., 8ನೇ ತರಗತಿ, ಶ್ರೀ ಸಾಯಿ ಪಬ್ಲಿಕ್ ಶಾಲೆ, ಬೆಂಗಳೂರು

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ವರ್ಷಾ ದೀಪಕ್**

ತಪೋನಗರದ ಧ್ಯಾನ ಮಂದಿರಗಳು, ದುರಸ್ತುಗೊಂಡ ನಂತರ ಹೊಸ ಬಣ್ಣದ ಲೇಪನ ಪಡೆಯುತ್ತಿರುವುದನ್ನು ನೋಡಿದಾಗ ಪವಿತ್ರ ವಿಧಿಗಳು ನಡೆಯುತ್ತಿರುವುದನ್ನು ವೀಕ್ಷಿಸುತ್ತಿರುವ ಅನುಭವವಾಗುತ್ತದೆ. ಅದು, ಪೂಜೆಗೆ ಮೊದಲು ದೇವಸ್ಥಾನಗಳಲ್ಲಿ ದೇವರ ವಿಗ್ರಹಗಳಿಗೆ ಅಭಿಷೇಕ ಮಾಡುವುದನ್ನು ನೋಡಿದ ಹಾಗೆಯೇ ಇದೆ.

ಶ್ರೀ ಜಯಂತ್ ದೇಶ್‌ಪಾಂಡೆಯವರ ಕೌಶಲಯುತ ಯೋಜನೆಯಡಿಯಲ್ಲಿ ಮತ್ತು ಶ್ರೀ ಕವೀಂದ್ರ ಅವರ ಬಹಳ ಎಚ್ಚರಿಕೆಯ ನಿರ್ವಹಣೆಯಡಿಯಲ್ಲಿ, ಕಳೆದ ವರ್ಷ ವಿಶ್ವ ಚೇತನ ಮಂದಿರವು(Cosmic Tower) ಒಳಗಿನಿಂದ ಒಪ್ಪ ಓರಣಗೊಂಡಿತು ಮತ್ತು ಪಿರಮಿಡ್ ಮೇಲ್ಛಾವಣಿಯು ಶುದ್ಧಗೊಳ್ಳುವುದರ ಜೊತೆಗೆ ದುರಸ್ತಿಗೊಂಡಿತು. ಈ ವರ್ಷ, ಹಾನಿಗೊಂಡಿದ್ದ ಹೊರಗಡೆಯ ಹೊಂಬಣ್ಣದ ಹಾಸು ಬಿಲ್ಲೆಗಳ(tiles) ಮೇಲೆ ಹೊಸ ಹಾಸು ಬಿಲ್ಲೆಗಳನ್ನು ಅಳವಡಿಸಲಾಗುತ್ತಿದೆ. ಯುಟಿಲಿಟಿ ಬ್ಲಾಕ್‌ಗೆ ಬಣ್ಣ ಲೇಪಿಸುವ ಕೆಲಸವು, ಕೊಠಡಿಗಳ ಒಳಗಡೆ ಪೂರ್ಣಗೊಂಡಿದ್ದರೆ ಹೊರಗಡೆ ಮುಕ್ತಾಯದ ಹಂತದಲ್ಲಿದೆ. ಕೆಳ ಅಂತಸ್ತಿನ ದೊಡ್ಡ ಸ್ಟೋರೇಜ್ ರೂಮಿನಲ್ಲಿ ಪುಸ್ತಕಗಳನ್ನು ಸಂಗ್ರಹಿಸಿ ಇಡಲು ಗಟ್ಟಿ ಮುಟ್ಟಾದ ಸಲಕರಣೆಗಳನ್ನು, ಸೌಲಭ್ಯಗಳನ್ನು ಒದಗಿಸಲಾಗಿದೆ.

ಮಣ್ಣಿನ ಬಣ್ಣದ ಹೊಸ ಲೇಪನವನ್ನು ಪಡೆದಿರುವ ಚಕ್ರ ಮಂಟಪಗಳು, ಪ್ರಕಾಶವಾಗಿ ಹೊಳೆಯುತ್ತಿದ್ದು ಇತರೆ ಕಟ್ಟಡಗಳೂ ಅವುಗಳಂತೆಯೇ ಆಗುವುದನ್ನು ಕಾಯುತ್ತಿವೆ. ಗುರೂಜಿಯವರ ಪವಿತ್ರ ಭಸ್ಮವನ್ನು ಹೊಂದಿರುವ ಗುರೂಜಿಯವರ ಸಮಾಧಿಯಲ್ಲಿನ ಗಾಜಿನ ಪಿರಮಿಡ್‌ಅನ್ನು ಕೆಲವು ತಿಂಗಳುಗಳ ಹಿಂದೆ ನವೀಕರಿಸಲಾಯಿತು. ಸಪ್ತರ್ಷಿಗಳ ಗುಹೆ ಮತ್ತು ಅಮರಾಜಿಯವರ ಗುಹೆಗಳ ಸುತ್ತಲೂ ಹಬ್ಬಿಸಲಾಗಿದ್ದ ಎಲೆಗಳಿಂದ ತುಂಬಿದ್ದ ಬಳ್ಳಿಗಳನ್ನು ಬಣ್ಣ ಲೇಪಿಸುವುದಕ್ಕಾಗಿ ತೆಗೆಯಲಾಗಿದೆ.

ಮೇ ತಿಂಗಳಿನಲ್ಲಿ ಗುರೂಜಿಯವರ ಹುಟ್ಟು ಹಬ್ಬದ ವಾರ್ಷಿಕೋತ್ಸವವನ್ನು ಆಚರಿಸುವುದಕ್ಕಾಗಿ, ಎಲ್ಲ ಧ್ಯಾನ ಮಂದಿರಗಳೂ ಸಮಯಕ್ಕೆ ಸರಿಯಾಗಿ ಸಿದ್ಧವಾಗುತ್ತವೆ. ■

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

## ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಏಪ್ರಿಲ್ 2005

ಇತ್ತೀಚೆಗೆ ನಾನು ಪುಣೆಗೆ ಹೋಗಿದ್ದಾಗ, ನಿಜವಾಗಿಯೂ ವಿನಯವಂತರಾಗಿದ್ದ ಕೆಲವು ಜನರನ್ನು ಭೇಟಿಮಾಡಿದೆ. ಅವರು ಮಹಾನ್ ವ್ಯಕ್ತಿಗಳೆಂದು ಅವರಿಗೆ ತಿಳಿದಿರಲಿಲ್ಲ. ಒಳ್ಳೆಯವರಾದ ಆದರೆ ಬಹಳ ಅಹಂಕಾರವುಳ್ಳ ಜನರನ್ನೂ ನಾನು ಭೇಟಿಮಾಡಿದೆ. ಎಲ್ಲಿಯಾದರೂ, ಎಂದಾದರೂ ನಾವು ಕನ್ನಡಿಯ ಮುಂದೆ ನಿಂತು ನಮ್ಮನ್ನೇ ನೋಡಿಕೊಳ್ಳಬೇಕು. ಆಗಿಂದಾಗ್ಗೆ ಆತ್ಮಾವಲೋಕನ ಮಾಡಿ, ಅಳೆದು ನೋಡಿ ನಾವು ಎಲ್ಲಿದ್ದೇವೆಂದು ತಿಳಿದುಕೊಂಡು ನಂತರ ಅಲ್ಲಿಂದ ಮುಂದೆ ಸಾಗಬೇಕು. ನಮ್ಮನ್ನು ಎಂದಿಗೂ ನಿಂದಿಸಿಕೊಳ್ಳಬಾರದು. ಇದನ್ನು ಪದೇಪದೇ ಹೇಳುತ್ತಿರುತ್ತೇನೆ. ನಾವೆಲ್ಲರೂ ಬೇರೆಬೇರೆ ಮಟ್ಟಗಳಲ್ಲಿರಬಹುದು ಆದರೆ ನಾವೆಲ್ಲರೂ ಸಾಧಕರೇ. ನಾವು ಮುಂದುವರಿಯುತ್ತಲೇ ಹೋಗೋಣ.

ನನ್ನ ನಂತರ, ಯಾರಾದರೊಬ್ಬರು "ನನಗೆ ಗುರೂಜಿಯವರೊಡನೆ ಸಂಪರ್ಕವಿದೆ" ಎಂದು ಹೇಳಬಹುದೇನೋ ಎಂದು ಅಚ್ಚರಿ ಪಡುತ್ತೇನೆ. ನಾನು ಯಾರ ಮೂಲಕವೂ ಸಂದೇಶ ಕೊಡುವುದಿಲ್ಲವೆಂದು ನಿಮಗೆ ವಾಗ್ದಾನ ಕೊಡುತ್ತೇನೆ!! ನಮ್ಮಲ್ಲಿ ಅದ್ಭುತ ಜನರಿದ್ದಾರೆ, ಪ್ರಸಂಶನೀಯ ಶಿಕ್ಷಕರು, ಮಾರ್ಗದರ್ಶಕರು, ಕಾರ್ಯಕರ್ತರು ಇದ್ದಾರೆ, ಅವರು ಅಂತಹುದನ್ನು ಎಂದಿಗೂ ಮಾಡುವುದಿಲ್ಲ. ನಮ್ಮಲ್ಲಿ ಸಾಕಷ್ಟು ಜ್ಞಾನವಿದೆ, ಮಾರ್ಗದರ್ಶನವಿದೆ, ತಂತ್ರಗಳಿವೆ ಹಾಗೂ ಅವರು ಬಹಳ ಸಾಧನೆಮಾಡಿದ್ದಾರೆ. ಮುಂದೆ ಅವರಿಗೆ ಕಳುಹಿಸುವ ಸಂದೇಶವನ್ನು ಅವರು ತಮ್ಮ ಒಳ ಅರಿವಿನ ಮೂಲಕ ಗ್ರಹಿಸಬಲ್ಲರು. ಅದರಲ್ಲಿ ನನಗೆ ಅನುಮಾನವಿಲ್ಲ. ನನ್ನ ನಂತರವೂ ಋಷಿಗಳ ಮಾರ್ಗದರ್ಶನ ಮುಂದುವರೆಯುತ್ತದೆ. ಅದನ್ನು ಈ ಜನರು ನಿರ್ವಹಿಸುತ್ತಾರೆ, ಅದಕ್ಕಾಗಿ ನಾವು ಸಂತೋಷ ಪಡೋಣ.

ಹಿಂದಿನ ರಾತ್ರಿ, ಗ್ರಹಣದ ಸಮಯದಲ್ಲಿ ಸುಮಾರು 5 ಗಂಟೆಗಳ ಕಾಲ ಧ್ಯಾನ ಮಾಡಿದೆವು. ಈ ಧ್ಯಾನದಿಂದ ಪಡೆದ ಚೈತನ್ಯಗಳು ಈ ಕೊಠಡಿಯಲ್ಲಿ ಇನ್ನೂ ಇದೆ. ನಾನು ಇಲ್ಲಿಗೆ ಪ್ರವೇಶಿಸಿದ ಕ್ಷಣವೇ ನನಗೆ ಅದರ ಅರಿವುಂಟಾಯಿತು. ಈ ವರ್ಷವನ್ನು ಹೊಸ ಚೈತನ್ಯಗಳಿಂದ ಪ್ರಾರಂಭಿಸಿದ್ದೇವೆ. ಈ ಗ್ರಹಣದೊಂದಿಗೆ, ವೈಯಕ್ತಿಕ ಮಟ್ಟದ ಪ್ರಳಯವು ತೀವ್ರಗೊಳ್ಳುತ್ತದೆಯೆಂದು ಋಷಿಗಳು ಹೇಳಿದ್ದಾರೆ. ನಾವು ಭಯಪಡಬೇಕಾಗಿಲ್ಲ. ಪ್ರಳಯವೆಂದರೆ, ಹೆಚ್ಚು ಅವಕಾಶಗಳು. ಹಾಗೆಂದರೆ ಗ್ರಹಣಗಳಿಂದ ಚೈತನ್ಯಗಳನ್ನು ಪಡೆಯುವುದಷ್ಟೇ ಅಲ್ಲ, ಋಷಿಗಳಿಂದ ಹೆಚ್ಚಿನ ಸಹಾಯವನ್ನು ಪಡೆಯುವುದೂ ಆಗುತ್ತದೆ. ಹಾಗೆಂದರೆ ನಾವು ಸಿದ್ಧರಾಗಬೇಕು, ಧ್ಯಾನಮಾಡಬೇಕು ಮತ್ತು ಸಕಾರಾತ್ಮಕರಾಗಬೇಕು.

ನನಗೆ ತಿಳಿದಹಾಗೆ, ಇದೇ ಮೊದಲ ಬಾರಿಗೆ ಇಷ್ಟೊಂದು ಅವಕಾಶಗಳು, ಇಷ್ಟೊಂದು ಹೊಸ ಹಾಗೂ ಸೂಕ್ತವಾದ ಚೈತನ್ಯಗಳು ಇಲ್ಲಿವೆ. ನಾವೆಲ್ಲರೂ ಈ ಅವಕಾಶಗಳನ್ನು ಹಾಗೂ ಚೈತನ್ಯಗಳನ್ನು ತಪ್ಪಿಸಿಕೊಳ್ಳುವುದಿಲ್ಲವೆಂಬ ನಂಬಿಕೆ ನನಗಿದೆ. ನಾವು ಅದೃಷ್ಟವಂತರು. ಯುವ ಪೀಳಿಗೆಯು ನಮಗಿಂತಲೂ ಅದೃಷ್ಟವಂತರು ಏಕೆಂದರೆ ಅವರು ಹೊಸ ಚೈತನ್ಯಗಳಿಂದಲೇ ಜೀವನವನ್ನು ಪ್ರಾರಂಭಿಸುತ್ತಾರೆ, ಅವರು ಅದಕ್ಕೆ ಅರ್ಹರೂ ಆಗಿದ್ದಾರೆ.

ಹೊಸ ವರ್ಷವನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಪುನರಾವರ್ತಿಸುತ್ತೇನೆ. ಧ್ಯಾನದ ವಿಜ್ಞಾನವನ್ನು ಕೊಟ್ಟವರು ವಿಶ್ವಾಮಿತ್ರ ಮಹರ್ಷಿಗಳೆಂದು ನೆನಪುವಾಡಿಕೊಳ್ಳೋಣ. ನಿಮಗಿದು ತಿಳಿದಿದ್ದರೂ, ನೀವಿದನ್ನು ಮತ್ತೊಮ್ಮೆ ನೆನಪುಮಾಡಿಕೊಳ್ಳಬೇಕೆಂದು ನಾನು ಬಯಸುತ್ತೇನೆ. 'ನಿಮ್ಮ ಗುರು ಯಾರು?' ಎಂದು ನನ್ನನ್ನೊಮ್ಮೆ ಕೇಳಿದರು. ನನ್ನ ಗುರುವಿನ ಹೆಸರನ್ನು ಅವರಿಗೆ ಹೇಳಿದೆ. 'ಅವರು ಯಾರೆಂದು ನನಗೆ ತಿಳಿದಿಲ್ಲ. ಅವರ ಬಗ್ಗೆ ಕೇಳಿಲ್ಲ' ಎಂದವರು ಹೇಳಿದರು. ಆದರೆ ವಿಶ್ವಾಮಿತ್ರ ಮಹರ್ಷಿಗಳ ಬಗ್ಗೆ ಎಲ್ಲರೂ ಕೇಳಿದ್ದಾರೆ. ಅವರೇ ನನ್ನ ಗುರುವಿಗೆ ಧ್ಯಾನದ ವಿಜ್ಞಾನವನ್ನು ಕೊಟ್ಟಿದ್ದು. ತಮ್ಮ ಸುತ್ತಲೂ ಇದ್ದವರಿಗೆ ನನ್ನ ಗುರು ಅದನ್ನು ಕೊಡಲು ಪ್ರಯತ್ನಿಸಿದರು. ಎಲ್ಲ ಜ್ಞಾನವನ್ನೂ ಕೊಡಲಾಗಲಿಲ್ಲ, ಸ್ವಲ್ಪ ಮಾತ್ರ ಕೊಟ್ಟರು. ನಾವು ಸಿದ್ಧರಾಗಿಲ್ಲವಾದ್ದರಿಂದ ಹೆಚ್ಚಿಗೆ ಪಡೆಯಲಾಗಲಿಲ್ಲ. ವಿಶ್ವಾಮಿತ್ರ ಮಹರ್ಷಿಗಳಿಂದ ಪಡೆದ ಜ್ಞಾನವನ್ನು ಇತರರಿಗೆ ಹಸ್ತಾಂತರಿಸುವ ಕಾರ್ಯವನ್ನು ಅಮರರವರು ಮುಂದುವರಿಸುತ್ತಾರೆ. ಆ ಪ್ರಕ್ರಿಯೆ ಪ್ರಾರಂಭವಾಗಿದೆ.

ಸಾಧನೆಯನ್ನು ಸರಿಯಾಗಿ ಅರ್ಥ–ಮಾಡಿಕೊಳ್ಳೋಣ. ಅದರಲ್ಲಿ ಎರಡು ಭಾಗವಿದೆ. ಮೊದಲ ಭಾಗದಲ್ಲಿ, ಸಮಾಧಿಯಲ್ಲಿ ಅಥವ ಆಳವಾದ ಧ್ಯಾನದಲ್ಲಿ ನಾವು ದೈವವನ್ನು ಅನುಭವಿಸುತ್ತೇವೆ. ಎರಡನೆಯ ಭಾಗದಲ್ಲಿ ಅದನ್ನು ಅಭಿವ್ಯಕ್ತಿಸುತ್ತೇವೆ. ಅನುಭವಿಸುವುದು ಹಾಗೂ ಅಭಿವ್ಯಕ್ತಿಸುವುದು – ಎರಡೂ ಮುಖ್ಯ. ಅನುಭವಿಸುವುದಕ್ಕಾಗಿ ಧ್ಯಾನ ಮಾಡಬೇಕು ಹಾಗೂ ಅಭಿವ್ಯಕ್ತಿಸುವುದಕ್ಕಾಗಿ ಪ್ರಜ್ಞಾಪೂರ್ವಕ ಪ್ರಯತ್ನ ಮಾಡಬೇಕು.

ಇದೊಂದು ಪಂಥವಲ್ಲ(cult). ಇದೊಂದು ಮಾರ್ಗ. ವ್ಯತ್ಯಾಸವೇನೆಂದರೆ, ಇಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ. ಇಲ್ಲಿ ಯಾವಾಗ ಬೇಕಾದರೂ ಹೊರನಡೆಯಬಹುದು ಅಥವಾ ಒಳಗೆ ಬರಲೂ ಬಹುದು. ಯಾರೂ ಪ್ರಶ್ನಿಸುವುದಿಲ್ಲ. ಇದೊಂದು ದೇವಸ್ಥಾನವಿದ್ದಂತೆ. ಜನರು ಬರಬಹುದು, ಹೋಗಬಹುದು ಹಾಗೂ ಮತ್ತೊಮ್ಮೆ ಬರಬಹುದು. ಇದೊಂದು ಮನೆಯಿದ್ದಂತೆ. "ಯಾಕೆ ಹೊರ ನಡೆದೆ? ಪುನಃ ಯಾಕೆ ಒಳ ಬಂದೆ?" ಎಂದು ಯಾವ ಮಾತಾಪಿತೃವೂ ಮಗುವನ್ನು ಕೇಳುವುದಿಲ್ಲ. ಇಲ್ಲಿ ಸ್ವಾತಂತ್ರ್ಯವಿದೆ. ಅದೇ ವ್ಯತ್ಯಾಸ. ಕಲ್ಟ್‌ನಲ್ಲಿ ಹೆಚ್ಚು ಸ್ವಾತಂತ್ರ್ಯವಿದೆ ಎಂದು ನನಗನ್ನಿಸುವುದಿಲ್ಲ. ಪ್ರೀತಿ ಹಾಗೂ ವಿಶ್ವಾಸದಿಂದಾಗಿ ಜನರು ಈ ಮಾರ್ಗಕ್ಕೆ ಬದ್ಧರಾಗಿದ್ದಾರೆ. ಇಲ್ಲಿ ಅಪಾರವಾದ ಜ್ಞಾನಸಂಪತ್ತು ಹಾಗೂ ಅವಕಾಶಗಳಿವೆಯೆಂದು ನೀವು ಅರಿತುಕೊಳ್ಳುವಿರಿ. ಆ ಜ್ಞಾನ ಮತ್ತು ಅರಿವಿನಿಂದಾಗಿ ಈ ಮಾರ್ಗದಲ್ಲಿಯೇ ಮುಂದುವರಿಯುವಿರಿ. ಅದು ನಿಮ್ಮ ಆಯ್ಕೆ, ಯಾವುದೇ ತರಹದ ಒತ್ತಾಯದಿಂದಲ್ಲ.

ಕಳೆದ ವಾರ ಓರಿಯಂಟೇಷನ್ ತರಗತಿಯಿತ್ತು. ಆ ಕೆಲಸದಲ್ಲಿ ನಾನು ತೊಡಗಿಕೊಂಡಿದ್ದೆ. ಅದು ಚೈತನ್ಯಪೂರ್ಣವಾಗಿತ್ತು. ಈ ರೀತಿಯ ಕೆಲಸದಲ್ಲಿ ತೊಡಗಿದಾಗಲೆಲ್ಲ ನಾನು ಯುವಕನಂತಾಗುತ್ತೇನೆ. ಅದು ಒಂದೇ ರೀತಿಯದ್ದಾಗಿರುವುದಿಲ್ಲ. ಅದು ಸಾಧನೆಯ ವಿವಿಧ ಆಯಾಮಗಳನ್ನು ಎತ್ತಿ ತೋರಿಸುವುದಾಗಿರುತ್ತದೆ. ಅದು ಹೊಸ ಕೋನವೊಂದನ್ನು, ಹೊಸ ವಿಷಯವೊಂದನ್ನು ಕಂಡುಕೊಳ್ಳುವ ಪ್ರಯತ್ನವಾಗಿರುತ್ತದೆ. ಇದನ್ನು ತಿಳಿಸುವ ಪ್ರಯತ್ನ ಮಾಡುತ್ತಿದ್ದೇನೆ. ಇದೊಂದು ಸೃಜನಶೀಲ ಕೆಲಸ. ಅದರ ಸಂಪೂರ್ಣ ಕೆಲಸದಲ್ಲಿ ನಾನು ಭಾಗಿಯಾಗಿದ್ದೆ. ಓರಿಯಂಟೇಷನ್ ತರಗತಿಯನ್ನು ಎಲ್ಲರೂ ಆನಂದಿಸಿದ್ದಾರೆಂಬ ಭರವಸೆ ನನಗಿದೆ. ಮೊದಲ ಬಾರಿಗೆ ಇದರಲ್ಲಿ ಭಾಗವಹಿಸಿದ್ದವರು ಓರಿಯಂಟೇಷನ್ ತರಗತಿಯ ಬಗೆಗಿನ ತಮ್ಮ ಅನುಭವವನ್ನು ಬರೆದು ಕಳಿಸಬೇಕೆಂದು ನಾನು ಬಯಸುತ್ತೇನೆ.

ಜಯಂತ್‌ರವರು ಹೇಳಿದಂತೆ ನಕಾರಾತ್ಮಕ ಭಾವನೆಗಳನ್ನು ನಿಭಾಯಿಸುವುದು ಸಾಧನೆಯ ಒಂದು ಭಾಗ. ಕೆಲವರು ಪ್ರಶಂಸನೀಯರು. ಅಮರರವರು ಸಕಾರಾತ್ಮಕಗೊಳಿಸಿಕೊಳ್ಳುತ್ತಿದ್ದ ಹಾಗೆಯೇ, ಅವರೂ ನಕಾರಾತ್ಮಕ ಭಾವನೆ, ಅನುಭವ ಹಾಗೂ ತಮಗೆದುರಾದ ಎಲ್ಲವನ್ನೂ ಸಕಾರಾತ್ಮಕಗೊಳಿಸಿಕೊಳ್ಳುತ್ತಾರೆ. ನಕಾರಾತ್ಮಕ ಭಾವನೆಗಳು ಸ್ವಾಭಾವಿಕ. ಅವು ಹೊರಗಿನಿಂದ ಬರಬಹುದು ಅಥವ ಒಳಗಿನಿಂದಲೇ ಬರಬಹುದು. ಅವು ನಮ್ಮದಲ್ಲವೆಂಬುವುದನ್ನು ನಾವು ಸದಾಕಾಲ ನೆನಪಿನಲ್ಲಿಡಬೇಕು. ನಮ್ಮದಲ್ಲದ ಬೇರೆ ಮೂಲದಿಂದ ಅವು ಬರುತ್ತವೆ. ಅವು ನಮ್ಮದಲ್ಲವಾದ್ದರಿಂದ ಅವುಗಳನ್ನು ನಾವು ಹಾಗೆಯೇ ತಿರಸ್ಕರಿಸಬಹುದು. ವಾಸ್ತವದಲ್ಲಿ ನಕಾರಾತ್ಮಕ ಭಾವನೆಗಳು ಹೆಚ್ಚು ಆಕರ್ಷಕವಾಗಿರುತ್ತವೆ. ಅವುಗಳನ್ನು ಅದುಮಿಡಿ, ಹೀಗೇ ನಾವು ಮುಂದುವರಿಯಬೇಕು. ನಕಾರಾತ್ಮಕ ಆಲೋಚನೆಗಳಿಗೆ ನಾವು ಕಿವಿ ಕೊಟ್ಟರೆ ಅಥವ ನಕಾರಾತ್ಮಕ ಭಾವನೆಗಳ ಹಿಂದೆ ಹೋದರೆ, ಅವು ನಮ್ಮನ್ನು ಸುಲಭವಾಗಿ ಕೆಳಕ್ಕೆ ಸೆಳೆಯುತ್ತವೆ. ■

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

10-8-2014

"ಕೇವಲ ಒಂದೇ ಮನಸ್ಸು ಇರುವುದರಿಂದ ಹಾಗೂ ಆ ಮನಸ್ಸಿಗೆ ಅಥವ ಪ್ರಜ್ಞೆಗೆ ನಾವು ಶ್ರುತಿಗೊಳ್ಳಬೇಕಾಗಿರುವುದರಿಂದ, ಪ್ರಜ್ಞೆಯಲ್ಲಿ ಅಥವ ಈ ಏಕ ಮನಸ್ಸಿನಲ್ಲಿರುವ ನಕಾರಾತ್ಮಕತೆಯು ನಮ್ಮ ಶಾಂತತೆಯನ್ನು ಕದಡುತ್ತದೆಯೇ?" ಎಂದು ಒಬ್ಬರು ನನ್ನನ್ನು ಕೇಳಿದರು.

ನಮ್ಮೆಲ್ಲರಲ್ಲೂ ಮನಸ್ಸಿದೆ, ಅದು ಈ ಏಕ ಮನಸ್ಸಿನಿಂದ ಬರುತ್ತದೆಯೆಂದುಕೊಳ್ಳೋಣ. ಪ್ರಜ್ಞೆಯು ಒಂದು ದೈವೀ ವಸ್ತು, ಈ ಪ್ರಜ್ಞೆಯಿಂದಲೇ ಮತ್ತೆಲ್ಲವೂ ಹೊರಬಂತು ಎಂದು ಗುರೂಜಿಯವರು ವಿವರಿಸಿದ್ದರು. ಪ್ರಜ್ಞೆಯು ಮನಸ್ಸಿಗಿಂತಲೂ ಸೂಕ್ಷ್ಮ. ಅದು ಅತ್ಯಂತ ಸೂಕ್ಷ್ಮ; ಅದು ಉನ್ನತ ತರಂಗಗಳಿಂದ ಕೂಡಿದೆ. ಪ್ರಜ್ಞೆಯಲ್ಲಿ ನಕಾರಾತ್ಮಕತೆ ಇರುವುದಿಲ್ಲ, ಅದಕ್ಕೆ ನಾವು ಶ್ರುತಿಗೊಂಡಾಗ ದೇವರಿಗೇ ಶ್ರುತಿಗೊಂಡಿರುತ್ತೇವೆ. ಯಾವುದೇ ದುಗುಡ ಇರುವುದಿಲ್ಲ. ಯಾವುದೇ ಸಮಸ್ಯೆ ಇರುವುದಿಲ್ಲ. ಯಾವುದೇ ನಕಾರಾತ್ಮಕತೆ ಇರುವುದಿಲ್ಲ.

ನನಗೆ ತಿಳಿದಂತೆ, ಇಡೀ ಬ್ರಹ್ಮ ಲೋಕದ ವಾತಾವರಣವು ಮನಸ್ಸಿನ ವಸ್ತುವಿನಿಂದ ಮಾಡಲಾಗಿದೆ ಹಾಗೂ ಅಲ್ಲಿ ಯಾವುದೇ ನಕಾರಾತ್ಮಕತೆಗಳಿರುವುದಿಲ್ಲ. ಆದ್ದರಿಂದ, ನಕಾರಾತ್ಮಕತೆಯು ನಮ್ಮ ಮೇಲೆ ಪರಿಣಾಮ ಬೀರುವ ಪ್ರಶ್ನೆಯೇ ಇಲ್ಲ. ಆದರೆ ಈ ಪ್ರಪಂಚದ ನಕಾರಾತ್ಮಕತೆ ನಮ್ಮ ಮೇಲೆ ಪರಿಣಾಮ ಬೀರುತ್ತದೆ. ಹಿಂಸಾಚಾರ ಮತ್ತು ಅನ್ಯಾಯಗಳ ಬಗ್ಗೆ ನಾವು ಪತ್ರಿಕೆಗಳಲ್ಲಿ ಓದಿದಾಗ ಅಥವ ಟಿವಿಯಲ್ಲಿ ನೋಡಿದಾಗ, ಆ ವಾರ್ತೆಯು ನಮ್ಮನ್ನು ವಿಚಲಿತಗೊಳಿಸುತ್ತದೆ, ನಮ್ಮ ಶಾಂತಿಯನ್ನು ಭಂಗ ಮಾಡುತ್ತದೆ. ಈ ಪ್ರಪಂಚದಲ್ಲಿನ ಹಿಂಸಾಚಾರಗಳ ಮತ್ತು ಅನ್ಯಾಯದ ತರಂಗಗಳು ಕೂಡ ನಮ್ಮನ್ನು ಕದಡುತ್ತವೆ. ನಾವು ಬೆಳಕಿನಿಂದ ಸಹಾಯ ಪಡೆಯಬೇಕು. ನಮ್ಮಲ್ಲಿ ಬೆಳಕನ್ನು ಹೊಂದಿರಬೇಕು ಹಾಗೂ ಆಧ್ಯಾತ್ಮಿಕ ವಾಸ್ತವಗಳನ್ನು ಅರ್ಥಮಾಡಿಕೊಳ್ಳಲು ಸಮಯ ವ್ಯಯಿಸಬೇಕು. ಇದು ತುಂಬಾ ಮುಖ್ಯ. ಉದಾಹರಣೆಗೆ, ಈಗಿನ ಸಮಯದ ಆಧ್ಯಾತ್ಮಿಕ ವಾಸ್ತವಗಳನ್ನು ನಾವು ಅರಿತುಕೊಳ್ಳಬೇಕು. ಈ ರೀತಿಯ ಅವ್ಯವಸ್ಥೆ, ಗೊಂದಲ, ನಕಾರಾತ್ಮಕತೆಗಳ ಪ್ರಕಟಗೊಳ್ಳುವಿಕೆ ಇತ್ಯಾದಿಗಳನ್ನು ತೀವ್ರ ಪ್ರಳಯದ ಈ ಸಮಯಗಳಲ್ಲಿ ನಿರೀಕ್ಷಿಸಲಾಗಿತ್ತು. ಇದನ್ನು ನಾವು ಅರ್ಥಮಾಡಿಕೊಂಡರೆ, ಈ ಜೀವನದ ವಾಸ್ತವಗಳನ್ನು ಎದುರಿಸಲು ಸಹಾಯವಾಗುತ್ತದೆ. ಮುಂದಿನ ದಿನಗಳು ಉಜ್ವಲವಾಗಿರುತ್ತವೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಭೂಮಿಯ ಮೇಲಿರುವ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಇವೆಲ್ಲವೂ ಸಹಾಯಕ. ಬೆಳಕನ್ನು ಚಾನಲ್ ಮಾಡುವುದನ್ನು, ನಾವು ಉತ್ತಮಗೊಳ್ಳುತ್ತಾ ಹೋಗುವುದನ್ನು ಮತ್ತು ಬೆಳೆಯುವುದನ್ನು ಮುಂದುವರಿಸುತ್ತಾ ಹೋಗೋಣ. ನಕಾರಾತ್ಮಕತೆಗಳನ್ನು ಮಾನಸಿಕವಾಗಿ ತಿರಸ್ಕರಿಸುತ್ತಾ ಹೋಗೋಣ.

ವಿಚಿತ್ರ ಆಲೋಚನೆಗಳು, ಅತ್ಯಂತ ನಕಾರಾತ್ಮಕ ಆಲೋಚನೆಗಳು ಕೆಲವು ವೇಳೆ ಇದ್ದಕ್ಕಿದ್ದಂತೆ ಬರುವುದನ್ನು ನಾವು ಗಮನಿಸಬಹುದು. ಇವುಗಳು ನಮ್ಮ ಆಲೋಚನೆಗಳಲ್ಲ ಎಂದು ಗುರೂಜಿಯವರು ವಿವರಿಸುತ್ತಿದ್ದರು. ಈ ಆಲೋಚನೆಗಳಲ್ಲಿ ನಾವು ಭಾಗಿಯಾಗಬಾರದು. ಜನರಿಂದ ಉತ್ಪತ್ತಿಯಾದ ನಕಾರಾತ್ಮಕ ಆಲೋಚನೆಗಳು ಈ ಭೂಮಿಯ ಮೇಲೆ ಹರಿದಾಡುತ್ತಿರಬಹುದು, ಹೇಗೋ ಅದು ನಮ್ಮನ್ನು ಪ್ರವೇಶಿಸುತ್ತದೆ. ಅಂಥಹ ಸಮಯಗಳಲ್ಲಿ ನಾವು ಆ ಆಲೋಚನೆಗಳನ್ನು ತಿರಸ್ಕರಿಸಬೇಕು. ಈ ಭೂಮಿಯ ಮೇಲಿನ ಜೀವನ ಸ್ಥಿತಿ, ನಕಾರಾತ್ಮಕ ರೀತಿಯಲ್ಲಿ ಜನರು ಬದುಕುವ ವಿಧಾನ, ಇವು ನಮ್ಮ ಆಲೋಚನೆ ಮತ್ತು ಭಾವನೆಗಳ ಮೇಲೆ ಪ್ರಭಾವ ಬೀರಿದರೆ ಮತ್ತು ಆತ್ಮ ಸ್ವರೂಪದ ನಾವು ನಕಾರಾತ್ಮಕವಾಗಿ ಆಲೋಚಿಸುವ ಮತ್ತು ಭಾವನೆಗೊಳಗಾಗುವ ಮೂಲಕ ಪ್ರತಿಸ್ಪಂದಿಸಿದರೆ, ಆಗ ನಾವು ದುಷ್ಟ ಚೈತನ್ಯಗಳನ್ನು ಆಕರ್ಷಿಸುತ್ತೇವೆ. ಇದು ಖಂಡಿತವಾಗಿ ನಮ್ಮ ನೆಮ್ಮದಿಗೆಡಿಸುತ್ತದೆ. ಆದ್ದರಿಂದ ನೆಮ್ಮದಿಯಿಂದಿರುವುದಕ್ಕೆ ಅಥವ ಇಲ್ಲದಿರುವುದಕ್ಕೆ ಅವಕಾಶಮಾಡಿಕೊಡುವುದು, ಸಂಪೂರ್ಣವಾಗಿ ನಮ್ಮ ಕೈಗಳಲ್ಲಿದೆ.

"ರಕ್ಷಣೆ ಪಡೆಯಲು ಕವಚ (shield)ಗಳಿವೆಯೆ?" ಎನ್ನುವ ಮತ್ತೊಂದು ಪ್ರಶ್ನೆಯಿತ್ತು.

ಹೌದು, ಋಷಿಗಳು ಕೊಟ್ಟಿರುವ ರಕ್ಷಾ ಕವಚಗಳು ನಮ್ಮೆಲ್ಲರಿಗೂ ಇವೆ. ಈ ಮಾರ್ಗದಲ್ಲಿ, ವಿದ್ಯಾರ್ಥಿಯು 'ಬೆಳಕನ್ನು ಅನುಭವಿಸುವ ಹಂತ'ವನ್ನು ತಲುಪಿದಾಗ, ಅವರಿಗೆ ಕವಚವನ್ನು ಕೊಡಲಾಗುತ್ತದೆ. ಈ ಕವಚವು ಚೈತನ್ಯದ ಕವಚ ಅಥವ ಬೆಳಕಿನ ಕವಚ, ಅದು ದುಷ್ಟ ಚೈತನ್ಯಗಳಿಂದ ನಮ್ಮನ್ನು ರಕ್ಷಿಸುತ್ತದೆ. ಕವಚವನ್ನು ಕೊಡದಿದ್ದರೂ ಕೂಡ, ವ್ಯಕ್ತಿಯೊಬ್ಬನ ಆಧ್ಯಾತ್ಮಿಕ ಸ್ಥಿತಿಗೆ ಅನುಗುಣವಾಗಿ ಅವನದೇ ಕವಚವನ್ನು ಹೊಂದಿರುತ್ತಾನೆ. ನಾವು ಶುದ್ಧರಾಗಿರುವ ಮೂಲಕ ಅದನ್ನು ಬಲಗೊಳಿಸಿಕೊಳ್ಳಬಹುದು.

"ನಮ್ಮ ಆಲೋಚನಾ ಕ್ರಮದ ಮೇಲೆ ಪರಿಣಾಮ ಬೀರುವಂತಹ ಜನರನ್ನು ಕೆಲವೊಮ್ಮೆ ಸಂಧಿಸುತ್ತೇವೆ. ಅವರ ಬಳಿಯಿದ್ದಾಗ ನಮ್ಮ ಚೈತನ್ಯಗಳು ಬರಿದಾಗುತ್ತವೆ, ನಮ್ಮ ಆತ್ಮವಿಶ್ವಾಸದ ಮಟ್ಟವು ಕುಗ್ಗುತ್ತದೆ. ಅದು ಹೇಗೆ? ನಮ್ಮನ್ನು ರಕ್ಷಿಸಿಕೊಳ್ಳುವುದು ಹೇಗೆ?" ಎಂದು ಮತ್ತೊಬ್ಬ ಧ್ಯಾನಿಯು ಕೇಳಿದರು.

ನಮ್ಮ ಆತ್ಮವಿಶ್ವಾಸವನ್ನು ಕುಗ್ಗಿಸುವ ಜನರಿದ್ದಾರೆಂದು ನನಗೆ ತಿಳಿದಿದೆ. ಅವರ ಮಾತುಗಳಿಂದ ಮತ್ತು ಅವರ ನಡತೆಯಿಂದ ನಮ್ಮ ಆತ್ಮಗೌರವಕ್ಕೆ ಧಕ್ಕೆ ತರುತ್ತಾರೆ. ಇರುವ ಒಂದೇ ದಾರಿಯೆಂದರೆ ನಾವು ಬಲಗೊಳ್ಳಬೇಕು. ನಾವು ದೇವರ ಒಂದು ಭಾಗವೆಂಬುದನ್ನು ನೆನಪುಮಾಡಿಕೊಂಡು, ನಮ್ಮ ಆತ್ಮಗೌರವಕ್ಕೆ ಚ್ಯುತಿಯುಂಟಾಗದಂತೆ ನೋಡಿಕೊಳ್ಳಬೇಕು. ಇದಕ್ಕೆ ಸಮಯ ಬೇಕಾಗುವುದೆಂದು ನನಗೆ ತಿಳಿದಿದೆ. ಇಂತಹ ಸಮಯಗಳಲ್ಲಿ ಧ್ಯಾನ ಅತಿಮುಖ್ಯವೆಂದು ನನಗನಿಸುತ್ತದೆ.

ಸತ್ಯಯುಗದಲ್ಲಿ ಧ್ಯಾನ ಬೇಕಾಗಿಲ್ಲ, ಆದರೆ ಈಗ ಅದು ಅತಿಮುಖ್ಯ, ಏಕೆಂದರೆ ನಮ್ಮ ಇತಿಮಿತಿಗಳನ್ನು ಹಾಗೂ ಪ್ರಪಂಚದ ನಕಾರಾತ್ಮಕತೆಗಳನ್ನು ನಾವು ಎದುರಿಸಬೇಕಾಗಿದೆ. ಧ್ಯಾನವೇ ಇದಕ್ಕೆ ಮಾರ್ಗ. ಧ್ಯಾನವು ಆಧ್ಯಾತ್ಮಿಕ ಬಲವನ್ನು ಮತ್ತು ವಿವೇಕವನ್ನು ತಂದುಕೊಡುತ್ತದೆ ಹಾಗೂ ನಮ್ಮಲ್ಲಿ ಬಲವಿದ್ದಾಗ ಜನ ನಮ್ಮನ್ನು ಗೌರವಿಸುತ್ತಾರೆ. ಇದು ಕೂಡ ವಾಸ್ತವವೇ.

ಕೆಲವು ಜನರು ನಮ್ಮೆದುರಿಗಿದ್ದಾಗ ಕೆಲವೊಮ್ಮೆ ನಮ್ಮ ಶಕ್ತಿ ಕುಂದಿದಂತಾಗುತ್ತದೆ, ನಾವು ಆಯಾಸಗೊಳ್ಳುತ್ತೇವೆ. ಈ ರೀತಿ ಆದಾಗ ನಾವು ಚಿಂತೆಗೊಳಗಾಗಬೇಕಾಗಿಲ್ಲ. ನಾವು ಧ್ಯಾನ ಮಾಡಬಹುದು, ಬೆಳಕನ್ನು ನಮ್ಮಲ್ಲಿರಿಸಿ-ಕೊಳ್ಳಬಹುದು ಮತ್ತು ಚೈತನ್ಯಗಳನ್ನು ಮರು ಪಡೆಯಬಹುದು. ನಾವು ಅನಂತ ಚೈತನ್ಯದೊಂದಿಗೆ ಸಂಪರ್ಕಗೊಂಡಿದ್ದಾಗ, ನಮ್ಮಿಂದ ಚೈತನ್ಯಗಳನ್ನು ಸೆಳೆದುಕೊಂಡರೆ ಯಾವ ತೊಂದರೆಯೂ ಆಗುವುದಿಲ್ಲ.

"ದೈವದೊಂದಿಗೆ ಉತ್ತಮ ಸಂಪರ್ಕ-ಗೊಳ್ಳುವುದಕ್ಕಾಗಿ ಶಕ್ತಿ ಪಡೆಯಲು, ತ್ಯಾಗ ಸಹಾಯ ಮಾಡುವುದೇ?" ಎನ್ನುವುದು ಮತ್ತೊಬ್ಬ ಧ್ಯಾನಿಯು ಕೇಳಿದ ಪ್ರಶ್ನೆ.

ತ್ಯಾಗವೆಂಬುದು ತುಂಬ ಶ್ರೇಷ್ಠವಾದ ಕ್ರಿಯೆ. ಉನ್ನತ ಕಾರ್ಯಗಳಿಗಾಗಿ ಮಾಡಿದ ತ್ಯಾಗ ಮತ್ತು ಬೇರೆಯವರಿಗಾಗಿ ನಿಸ್ವಾರ್ಥದಿಂದ ಮಾಡಿದ ತ್ಯಾಗ, ನಮ್ಮನ್ನು ದೈವಕ್ಕೆ ಸಂಪರ್ಕಿಸುತ್ತದೆ.

24-8-2014

ನಾವು ಇಲ್ಲಿಗೆ ಕೆಳಗಿಳಿದು ಬರುವ ಮೊದಲೇ, ಇಲ್ಲಿಯ ಜೀವನವು ಪರಿಪೂರ್ಣವಲ್ಲವೆಂದು ನಮಗೆ ತಿಳಿಸಲಾಗಿತ್ತು. ಅದು ತಿಳಿದಿದ್ದೂ ಕೆಳಗೆ ಬರಲು ನಾವು ಆಯ್ಕೆ ಮಾಡಿಕೊಂಡೆವು. ಇಲ್ಲಿನ ಜೀವನವು ನಮ್ಮಂತೆಯೇ ಅಪರಿಪೂರ್ಣವಾಗಿದ್ದರೂ, ಇಲ್ಲಿ ಸುಂದರ ವಸ್ತುಗಳಿವೆ, ಅದ್ಭುತ ವಿಷಯಗಳಿವೆ. ಈ ಪ್ರಪಂಚದ ಬಗ್ಗೆ, ಅಪರಿಪೂರ್ಣತೆಯ ಬಗ್ಗೆ, ಜನರ ಬಗ್ಗೆ ದೂರುತ್ತಾ ಹೋದರೆ, ಜೀವನದಲ್ಲಿ ಬಹಳಷ್ಟನ್ನು ಕಳೆದುಕೊಳ್ಳುತ್ತೇವೆ. ಜನರನ್ನು ಅವರ ಎಲ್ಲ ಅಪರಿಪೂರ್ಣತೆಗಳೊಂದಿಗೆ ಒಪ್ಪಿಕೊಳ್ಳಬೇಕು. ನಾವು ದೇವರ ಭಾಗವಾದರೆ ಅವರು ಕೂಡ ದೇವರದೇ ಭಾಗ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು –ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ಼ೀಯು ರೂ. 4500. ಈ ಫ಼ೀನಲ್ಲಿ 14% ಸೇವಾ ತೆರಿಗೆ, ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ಼ೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ಼ೀಯು ರೂ. 3500. ಈ ಫ಼ೀನಲ್ಲಿ 14% ಸೇವಾ ತೆರಿಗೆ ಮತ್ತು ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿ – ನಮ್ಮ ಪ್ರೀತಿಯ ಮಾಸ್ಟರ್

**ಶೋಭಾ ಕೆ. ರಾವ್; ಅನು: ಪಾಂಡುರಂಗ**

ನಮ್ಮ ಮಾಸ್ಟರ್ ಮತ್ತು ಮಹಾನ್ ಮಹರ್ಷಿಯಾದ ಗುರೂಜಿಯವರು ನಮ್ಮ ಜೊತೆಯಲ್ಲಿಯೇ ಇದ್ದಾರೆ. ನಮ್ಮ ಪ್ರಜ್ಞೆಯಲ್ಲಿ ಅವರೇ ತುಂಬಿದ್ದಾರೆ ಮತ್ತು ನಮ್ಮ ಜೀವನ, ಅವರ ಸುತ್ತಲೂ ಮತ್ತು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಅವರ ಸಂದೇಶಗಳ ಸುತ್ತಲೂ ಹೆಣೆದಿದೆ. ನಮ್ಮ ಆಧ್ಯಾತ್ಮಿಕ ಪ್ರಯಾಣದಲ್ಲಿ ಅವರನ್ನು ಭೇಟಿ ಮಾಡಿ, ಅವರಿಂದ ಮಾರ್ಗದರ್ಶನ ಪಡೆದ ನಂತರ ಅದು ನಮಗೆ ಜೀವನದ ಸೂಕ್ಷ್ಮ ವ್ಯತ್ಯಾಸಗಳನ್ನು ಅರ್ಥ ಮಾಡಿಕೊಳ್ಳಲು ಹಾಗೂ ಅವುಗಳನ್ನು ಗೌರವಿಸುವುದಕ್ಕೂ ಸಹಾಯವಾಗುತ್ತಿದೆ.

ಎಲ್ಲರೂ ಜೀವನವನ್ನು ಮತ್ತು ಈ ಜಗತ್ತನ್ನು ಅದರ ಎಲ್ಲ ವೈವಿಧ್ಯತೆಯೊಂದಿಗೆ ಪ್ರೀತಿಸಬೇಕು ಎಂದು ಗುರೂಜಿಯವರು ಹೇಳುತ್ತಿದ್ದರು. ರಂಗು ರಂಗಿನ ಛಾಯೆಗಳಿಂದ ಕೂಡಿದ ಈ ಜೀವನಕ್ಕೆ ಮಹತ್ವ ಕೊಡಬೇಕೆಂದು ಹೇಳುತ್ತಿದ್ದರು, ಹಾಗೂ ಅವುಗಳನ್ನು ಗಮನಿಸಲು, ಹಾಗೂ ಅನುಭವಿಸಿ ಆನಂದಿಸಲು ಹೇಳುತ್ತಿದ್ದರು. ಈ ರೀತಿಯ ಜೀವನದ ಅನುಭವವು ನಮ್ಮನ್ನು ಸಮೃದ್ಧಗೊಳಿಸುತ್ತದೆಯೆಂಬ ಅರಿವು ಮೂಡಿಸಿದರು. ದೈವದ ಅರಿವು ನಮ್ಮಲ್ಲಿ ಮೂಡಿದಾಗ ಮತ್ತು ನಮ್ಮ ಸುತ್ತ ಮುತ್ತಲಿನ ಜೀವನದಲ್ಲಿ ಆತನ ಇರುವಿಕೆಯ ಅನುಭವ ಪಡೆದಾಗ 'ಅನುಭವಿಸುವುದು' ಪದದ ನಿಜವಾದ ಅರ್ಥ ನಮಗೆ ಗೋಚರಿಸುತ್ತದೆ. ದೇವರ ಅದ್ಭುತ ಕೊಡುಗೆಯಾದ 'ಜೀವ ಶಕ್ತಿ'ಯ ಬಗ್ಗೆ ನಮಗೆ ಅರಿವು ಮೂಡಿಸಿದ್ದು ಗುರೂಜಿಯವರೇ. ಮರದ ರೆಂಬೆಗಳಿಂದ ಉದುರಿದ ಎಲೆಗಳ ಜಾಗದಲ್ಲಿ ಮತ್ತೆ ಹೊಸದಾಗಿ ಚಿಗುರುತ್ತಿರುವ ಚಿಕ್ಕ ಚಿಕ್ಕ ಹಸಿರೆಲೆಗಳನ್ನು ನೋಡಿದಾಗ, 'ಜೀವ ಶಕ್ತಿ'ಯ ಬಗೆಗೆ ಗುರೂಜಿಯವರು ಹೇಳಿದ ಸುಂದರ ಮಾತುಗಳು ನೆನಪಾಗುತ್ತವೆ. ಗುರೂಜಿ ಹೇಳುವಂತೆ ಈ ಜೀವ ಶಕ್ತಿ, ಜೀವನದಲ್ಲಿ ಎಲ್ಲವೂ ಶಕ್ತಿ ಉತ್ಸಾಹಗಳಿಂದ ತುಡಿಯುತ್ತಿರುವಂತೆ, ಸುಂದರವಾಗಿರುವಂತೆ ಮತ್ತು ಆಹ್ಲಾದಕರವಾಗಿರುವಂತೆ ಮಾಡುತ್ತದೆ. ಈ ಜೀವ ಶಕ್ತಿಯನ್ನು ಅಭಿವ್ಯಕ್ತಿಸುವುದರಿಂದ, ನಾವು ಸಕಾರಾತ್ಮಕರಾಗಿ ಬೆಳೆಯಲು, ನಮ್ಮ ಜೀವನವನ್ನು ಆಧ್ಯಾತ್ಮೀಕರಿಸಿಕೊಳ್ಳಲು ಸಹಾಯ ಮಾಡುತ್ತದೆ. "ನಾವು ಜೀವ ಶಕ್ತಿಯನ್ನು ಅಭಿವ್ಯಕ್ತಗೊಳಿಸದೆ ಇದ್ದರೆ ನಾವು ಜೀವನವನ್ನೇ ನಡೆಸಿಲ್ಲ" ಎಂದು ಗುರೂಜಿಯವರು ಒತ್ತು ಕೊಟ್ಟು ಹೇಳುತ್ತಿದ್ದರು.

ಗುರೂಜಿಯವರ ಮಾತುಗಳನ್ನು ಅರ್ಥ ಮಾಡಿಕೊಂಡು ಪಾಲಿಸಿದಾಗ ಈ ಜೀವನ ಅದೆಷ್ಟು ಪವಿತ್ರವಾದುದು ಎಂಬುದನ್ನು ಅರಿತುಕೊಳ್ಳುತ್ತೇವೆ. ಅವರ ಮಾತುಗಳು ನಮ್ಮ ಕಿವಿಗಳಲ್ಲಿ ಮಾರ್ದನಿಸುತ್ತವೆ, "ದೇವರು ದೂರದಲ್ಲೆಲ್ಲೋ ಇಲ್ಲ. ಆತ ನಮ್ಮೊಳಗೆ ಮತ್ತು ನಮ್ಮ ಸುತ್ತ ಮುತ್ತಲೂ ಇದ್ದಾನೆ. ನಾವು ಕೇವಲ ನಮ್ಮ ಅರಿವನ್ನು ಸ್ಥಿತ್ಯಂತರಗೊಳಿಸಿಕೊಂಡು ಅವನ ಇರುವಿಕೆಯೊಂದಿಗೆ ಮಾತನಾಡಬಹುದು." ನಮ್ಮ ಜೀವನದ ಎಲ್ಲ ಮಟ್ಟಗಳಲ್ಲೂ ನಾವು ಆಧ್ಯಾತ್ಮಿಕತೆಯಿಂದ ಜೀವಿಸಲು ಹೆಚ್ಚಿನ ಪ್ರಯತ್ನಗಳನ್ನು ಮಾಡೋಣ, ಪ್ರತಿ ಕ್ಷಣ ನಮ್ಮ ಮಾಸ್ಟರ್ ತಿಳಿಸಿರುವ ಸರಳವಾದ ದಾರಿಗಳ ಮೂಲಕ ನೇರವಾಗಿ ದೇವರ ಜೊತೆ ಸಂಪರ್ಕ ಪಡೆಯೋಣ. ಮತ್ತು ಈ ಜೀವನದ ಉದ್ದೇಶ ಈಡೇರಿಸಿಕೊಳ್ಳಲು ಈ ರೀತಿಯಲ್ಲಿ ಪರಿವರ್ತನೆಯಾಗೋಣ. ■

## ಗುರೂಜಿಯವರ ಮಹತ್ವಾಕಾಂಕ್ಷೆ

**ಉಷಾ ಸತೀಶ್‌ಚಂದ್ರ; ಅನು: ಸುಧಾಕರ್**

ಜೀವನದ ಸವಾಲುಗಳನ್ನು ಎದುರಿಸುವಾಗಿನ ವ್ಯಕ್ತಿಗತ ಭಯ, ಅಭದ್ರತೆ, ಅಶಕ್ತತೆ ಮತ್ತು ಅನೇಕ ಇತರೆ ಪ್ರತಿರೋಧಗಳು ನಮ್ಮನ್ನು ದಿಕ್ಕೆಡಿಸುತ್ತವೆ. ಪರಿಹಾರಕ್ಕಾಗಿ ಮತ್ತು ಮಾರ್ಗದರ್ಶನಕ್ಕಾಗಿ 'ಮಾನಸ'ದ ತೆಕ್ಕೆಯೊಳಕ್ಕೆ ಅಡಿಯಿರಿಸಿದಾಗ, ಹೊಸದೊಂದು ಪ್ರಪಂಚಕ್ಕೆ ಬಾಗಿಲು ತೆರೆದುಕೊಳ್ಳುತ್ತದೆ. ಗುರೂಜಿ, ಅಮರ ಮತ್ತು ಋಷಿಗಳ ಕನಸಾದ ತಪೋನಗರದಲ್ಲಿ ದೈವೀ ಪ್ರೀತಿ ಮತ್ತು ಚೈತನ್ಯಗಳ ಸಮೃದ್ಧತೆಯನ್ನು ನಾವು ಅನುಭವಿಸಬಹುದು. ಅವರ ಪ್ರೀತಿಯ ಆರೈಕೆಯನ್ನು ಅನುಭವಿಸಿದ ನಾನು, ನಿರಂತರ ಮಾರ್ಗದರ್ಶನಕ್ಕೆ ಇರುವ ಸರಳ ಉಪಾಯವೆಂದರೆ ನಮ್ಮ ಬೇರುಗಳನ್ನು ಗುರೂಜಿಯವರಲ್ಲಿ ಅಥವ ದೇವರಲ್ಲಿ ನೆಲೆಗೊಳಿಸುವುದಾಗಿದೆ, ಎಂದು ಅರಿತುಕೊಂಡೆ. ಗುರೂಜಿಯವರ ಆಧ್ಯಾತ್ಮಿಕ ಜೀವನವು ಸದಾ ಅವರ ಗುರು ಅಮರರವರಿಂದ ಮತ್ತು ಋಷಿಗಳಿಂದ ತುಂಬಿತ್ತು. ಪ್ರೀತಿ ಮತ್ತು ನ್ಯಾಯವನ್ನಾಧರಿಸಿದ ಜಾಗತಿಕ ವ್ಯವಸ್ಥೆಯುಳ್ಳ ಮತ್ತೊಂದು ಶಂಬಲವನ್ನು ಕಟ್ಟಲು ತಪೋನಗರವನ್ನು ಋಷಿಗಳು ಆಯ್ಕೆ ಮಾಡಿಕೊಂಡಿದ್ದಾರೆ. ಈ ಜಾಗತಿಕ ವ್ಯವಸ್ಥೆಯನ್ನು ನಮ್ಮೊಳಗೆ ನೆಲೆಗೊಳಿಸುವುದೇ ಅವರ ಯೋಜನೆ. "ತಪೋನಗರಕ್ಕೆ ಶ್ರುತಿಗೊಳ್ಳಿ. ನಮ್ಮ ಜೊತೆಗಿನ ನಿಮ್ಮ ಸಂಬಂಧವು ಎಂದಿಗೂ ಕಡಿದು ಹೋಗುವುದಿಲ್ಲ. ನೀವು ಧ್ಯಾನದ ಪಾಠವನ್ನಷ್ಟೇ ಒಯ್ಯುತ್ತಿಲ್ಲ, ಇಡೀ ಮನುಕುಲದ ಏಳಿಗೆಯ ಕನಸಿಗೆ ಸೇರ್ಪಡೆಯಾಗುತ್ತಿದ್ದೀರಿ" ಎಂಬ ಗುರೂಜಿಯವರ ಮಾತುಗಳನ್ನು ಆಗಿಂದಾಗ್ಗೆ ನೆನಪು ಮಾಡಿಕೊಳ್ಳುತ್ತಿರುತ್ತೇನೆ.

ದೈವೀ ಪ್ರೀತಿ ಮತ್ತು ಸ್ವಾತಂತ್ರ್ಯಗಳಿಂದ ತುಂಬಿರುವ ತಪೋನಗರವು ಗುರೂಜಿಯವರ ಪ್ರಪಂಚ. ಇಲ್ಲಿನ ಮೊದಲ ಸತ್ಯಾಂಶವೆಂದರೆ ಧ್ಯಾನ. "ಧ್ಯಾನದ ಸಮಯದಲ್ಲಿ ನಮ್ಮ ಸೂಕ್ಷ್ಮತೆ ಪರಮಾವಧಿಗೇರುತ್ತದೆ. ಧ್ಯಾನದಲ್ಲಿ ಮಾತ್ರ ವಿಶ್ವ ಚೈತನ್ಯವು ನಮ್ಮನ್ನು ಪ್ರವೇಶಿಸಿ ನಮ್ಮನ್ನು ಆಮೂಲಾಗ್ರವಾಗಿ ಶುದ್ಧಗೊಳಿಸುತ್ತದೆ. ಈ ಚೈತನ್ಯಗಳಿಂದ ಅಶುದ್ಧಿಯ ಕೊನೆಯ ಕುರುಹನ್ನೂ ಅಳಿಸಿಹಾಕಬಹುದು," ಎಂದು ಗುರೂಜಿಯವರು ಹೇಳುತ್ತಾರೆ. ಬದುಕನ್ನು ನಿಭಾಯಿಸಲು ಆಧಾರವಾಗಲೆಂದು ಮಾತ್ರವೇ ಇಲ್ಲಿ ಸಾಧನೆ ಮಾಡುವುದಿಲ್ಲ. ಹೆಚ್ಚಾಗಿ ಇದು, ಪರಿಪೂರ್ಣ ವ್ಯಕ್ತಿಯಾಗಲು ನಮ್ಮೆಲ್ಲ ಆಲೋಚನೆ ಮತ್ತು ಭಾವನೆಗಳನ್ನು ವಿಕಸನಗೊಳಿಸಿಕೊಳ್ಳುವುದಾಗಿದೆ.

ಗುರೂಜಿಯವರ ಅಧ್ಯಾತ್ಮಿಕತೆಯೆಂದರೆ ದೇವರನ್ನು ಪ್ರೀತಿ, ಶಾಂತಿ ಮತ್ತು ಕ್ಷಮೆಯಾಗಿ ಅಭಿವ್ಯಕ್ತಿಸುವುದಾಗಿದೆ. ಅವರ ನಿಜವಾದ ಅನುಯಾಯಿಗಳಾಗಲು ನಾವು ಇವುಗಳನ್ನೇ ಆಯ್ಕೆ ಮಾಡಿಕೊಳ್ಳುತ್ತೇವೆ. ಇಂತಹ ಮಹಾನ್ ಮಾಸ್ಟರ್‌ಗೆ ಗೌರವಾದರ ತೋರುವುದಕ್ಕಾಗಿ ನಾವು ನಮ್ಮದೇ ಬೆಳಕಿನಿಂದ ಪ್ರಕಾಶಿಸಬೇಕು. ಅವರು ಅಧ್ಯಾತ್ಮಿಕ ಪ್ರೇಮವನ್ನು ಹರಿಸುವುದಕ್ಕೆ ಸಿದ್ಧರಾಗಿ, ತಮ್ಮ ಜನ್ಮ ದಿನದಂದು ಆಕಾಂಕ್ಷಿಗಳಿಗಾಗಿ ಕಾತುರದಿಂದ ಕಾಯುತ್ತಿರುತ್ತಾರೆ. ಅವರ ಕರೆಗೆ ಓಗೊಟ್ಟು, ಅವರ ದೂರದೃಷ್ಟಿಗೆ ಮತ್ತು ಕನಸಿಗೆ ನಮ್ಮನ್ನು ಒಪ್ಪಿಸಿಕೊಂಡಾಗ ಅವರ ಕೃಪೆಯನ್ನು ಅನುಭವಿಸುತ್ತೇವೆ ಮತ್ತು ನಮ್ಮ ಮೇಲಿನ ಅವರ ನಂಬಿಕೆಯನ್ನು ಮತ್ತೊಮ್ಮೆ ಪೋಷಿಸಿದಂತಾಗುತ್ತದೆ! ■

# ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಜನರು ಒಬ್ಬರನ್ನೊಬ್ಬರು ಅನೇಕ ಜನ್ಮಗಳಲ್ಲಿ ಏಕೆ ಭೇಟಿಯಾಗುತ್ತಾರೆ?**

ಉ: ಇದಕ್ಕೆ ಅನೇಕ ಕಾರಣಗಳಿವೆ. ಇಬ್ಬರು ಒಬ್ಬರನ್ನೊಬ್ಬರು ಇಷ್ಟ ಪಡುತ್ತಾರೆ. ಅವರು ಸ್ನೇಹಿತರೂ ಆಗಿರಬಹುದು, ಮದುವೆಯಾದ ಪುರುಷ ಮತ್ತು ಮಹಿಳೆ ಆಗಿರಬೇಕೆಂದಿಲ್ಲ. ಬಹುಶಃ ಅವರು ಜೊತೆಯಾಗಿ ಜೀವನದ ಅನುಭವ ಪಡೆಯಲು ಭೇಟಿಯಾಗುತ್ತಿರಬಹುದು. ಆದರೆ ಈ ಮಾರ್ಗದಲ್ಲಿರುವ ನಾವು, ಋಷಿಗಳ ಕೆಲಸವನ್ನು ಮಾಡಲು ಭೇಟಿಯಾಗುತ್ತೇವೆ. ನಾವು ಭೇಟಿಯಾಗುವ ಪ್ರಥಮ ಉದ್ದೇಶ ಯಾವಾಗಲೂ ಕೆಲಸ ಮಾಡುವುದೇ ಆಗಿರುತ್ತದೆ, ನಂತರ ವೈಯಕ್ತಿಕ ಸಂಬಂಧ, ಅದು ಒಳ್ಳೆಯದೇ.

**ಪ್ರ: ಬೆಳಕು ನಮ್ಮ ಸಮಸ್ಯೆಗಳನ್ನು ನಿವಾರಿಸುತ್ತದೆಯೇ?**

ಉ: ಬೆಳಕು ನಮ್ಮ ಎಲ್ಲ ಸಮಸ್ಯೆಗಳನ್ನೂ ನಿವಾರಿಸುತ್ತದೆ. ಕೆಲವು ಸಮಸ್ಯೆಗಳು ನೇರವಾಗಿ ಪರಿಹರಿಸಲ್ಪಡುತ್ತವೆ, ಕೆಲವೊಮ್ಮೆ ತಕ್ಷಣದಲ್ಲಿ. ಕೆಲವು ಸಮಸ್ಯೆಗಳನ್ನು ಪವಾಡಸದೃಶ್ಯವಾಗಿ ಪರಿಹರಿಸಲಾಗುವುದಿಲ್ಲ. ಆದರೆ ಬೆಳಕು, ಸಮಸ್ಯೆಯ ಜೊತೆಯಲ್ಲಿ ಜೀವಿಸಲು ನಮಗೆ ಧೈರ್ಯ ಮತ್ತು ವಿವೇಕವನ್ನು ಕೊಡುತ್ತದೆ, ಸಮಸ್ಯೆಗಳು ನಿಧಾನವಾಗಿ ಮಾಯವಾಗುತ್ತವೆ. ನಾವು ನಿಜವಾಗಿಯೂ ಆತ್ಮದ ಮಟ್ಟದಿಂದ ಆಯ್ಕೆ ಮಾಡಿಕೊಂಡರೆ, ಬೆಳಕು ಎಲ್ಲ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತದೆ. ನಮಗೆ ಅನುಭವವಾದಾಗ ಮಾತ್ರವೇ ಈ ಸತ್ಯಸಂಗತಿಯನ್ನು ಒಪ್ಪಿಕೊಳ್ಳುತ್ತೇವೆ.

**ಪ್ರ: ನಿಮ್ಮೊಂದಿಗೆ, ಋಷಿಗಳೊಂದಿಗೆ, ಅಥವಾ ಬೇರೆ ವ್ಯಕ್ತಿಯೊಂದಿಗೆ ಸಂಪರ್ಕ ಹೊಂದುವುದು ಹೇಗೆ?**

ಉ: ಒಬ್ಬ ವ್ಯಕ್ತಿಯನ್ನು ನೆನಸಿಕೊಂಡರೆ, ನೀವು ಆ ವ್ಯಕ್ತಿಯ ಜೊತೆಗೆ ಮನಸ್ಸಿನ ಮಟ್ಟದಲ್ಲಿ ಸಂಪರ್ಕ ಹೊಂದುತ್ತೀರಿ. ಆದರೆ ಬೆಳಕಿಗೆ ಸಂಪರ್ಕಗೊಂಡರೆ, ಆ ವ್ಯಕ್ತಿಯನ್ನು ನೀವು ಆತ್ಮದ ಮಟ್ಟದಲ್ಲಿ ಸಂಪರ್ಕಿಸುತ್ತೀರಿ. ಋಷಿಯೊಬ್ಬರ ಜೊತೆ, ನನ್ನ ಜೊತೆ ಅಥವಾ ಯಾರ ಜೊತೆಗಾಗಲೀ ನೀವು ಸಂಪರ್ಕ ಹೊಂದಲು ಋಷಿಯೊಬ್ಬರ ಆಕೃತಿಯನ್ನು ಕಲ್ಪಿಸಿಕೊಳ್ಳಿ, ಆ ಋಷಿಯ ಹೆಸರನ್ನು ಒಂದು ಸಲ ಹೇಳಿ, ಪ್ರಾರ್ಥಿಸಿಕೊಳ್ಳಿ, ನಿಮ್ಮಿಂದ ಬೆಳಕಿನ ಕಿರಣ ಋಷಿಯನ್ನು ಸೇರುತ್ತಿದೆ ಎಂದು ಭಾವಿಸಿಕೊಳ್ಳಿ. ಅದು ಇಬ್ಬರನ್ನೂ ಸಂಪರ್ಕಿಸುತ್ತದೆ.

**ಪ್ರ: ಪ್ರತಿಯೊಂದು ಆತ್ಮವೂ ಒಂದೇ ಮೂಲದಿಂದ ಬರುತ್ತದೆ. ಹಾಗಿರುವಾಗ ಬೆಳವಣಿಗೆಯ ಮಟ್ಟದಲ್ಲಿ ವ್ಯತ್ಯಾಸ ಏಕೆ?**

ಉ: ಮೂಲತಃ ಪ್ರತಿಯೊಂದೂ ದೇವರ ಬೆಳಕಿನಿಂದಲೇ ಬಂದಿದೆ. ದೇವರು ಅನೇಕ ಜಗತ್ತುಗಳನ್ನು, ಲೋಕಗಳನ್ನು ಸೃಷ್ಟಿಸಿದ್ದಾನೆ. ಹಾಗೇ ಈ ಲೋಕಗಳಲ್ಲಿ ಆತ್ಮಗಳನ್ನು ಸೃಷ್ಟಿಸಿದ್ದಾನೆ. ಆದಕಾರಣ ಈ ಯಾವುದಾದರು ಒಂದು ಲೋಕದಿಂದ ಆತ್ಮ ಬಂದಾಗ ಅದರ ಮೂಲ ದೇವರು ಅಲ್ಲ, ಆತ್ಮದ ಮೂಲ ಆ ಲೋಕವೇ ಆಗಿರುತ್ತದೆ. ನಿರ್ದಿಷ್ಟ ಕಾರ್ಯಾಚರಣೆಗಾಗಿ ಅನೇಕ ಆತ್ಮಗಳನ್ನು ಸೃಷ್ಟಿಸಲಾಗುತ್ತದೆ. ಈ ಆತ್ಮಗಳು ಉನ್ನತ ಮಟ್ಟದ ಅಧ್ಯಾತ್ಮಿಕ ವಿಕಸನ ಹೊಂದಿಲ್ಲದಿರಬಹುದು. ದೇವರು ಅಧೋ ಲೋಕಗಳಲ್ಲಿ ವಾಸ ಮಾಡುವ ಆತ್ಮಗಳನ್ನೂ ಸೃಷ್ಟಿಸಿದ್ದಾನೆ. ಇವು ದುಷ್ಟ ಆತ್ಮಗಳು, ಒಳ್ಳೆಯ ಆತ್ಮಗಳಲ್ಲ. ಆದಕಾರಣ ಮೂಲತಃ ನಾವು ದೇವರಿಂದ ಬಂದಿದ್ದರೂ, ಒಂದೇ ಮೂಲದಿಂದ ಬಂದಿದ್ದೇವೆ ಎನ್ನುವುದು ಸತ್ಯವಲ್ಲ. ಎರಡನೆಯ ಬಹಳ ಮುಖ್ಯವಾದ ಅಂಶವೆಂದರೆ ನಮಗೆ ಇಚ್ಛಾ ಸ್ವಾತಂತ್ರ್ಯವಿದೆ. ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ತಮ್ಮ ಇಚ್ಛಾ ಸ್ವಾತಂತ್ರ್ಯವನ್ನು ಚಲಾಯಿಸಿ, ಬೆಳೆಯುತ್ತಾರೆ ಅಥವ ಬೆಳೆಯುವುದಿಲ್ಲ. ಅವರ ಬೆಳವಣಿಗೆ ಮಟ್ಟವು ಸಹಜವಾಗಿಯೇ ಭಿನ್ನವಾಗಿರುತ್ತವೆ ಮತ್ತು ಬೇರೆ ಬೇರೆಯಾಗಿರುತ್ತವೆ.

**ಪ್ರ: ಜ್ಞಾನೋದಯ ಪಡೆದ ಆತ್ಮವು ದುಷ್ಟ ಆತ್ಮವಾಗುವ ಸಾಧ್ಯತೆ ಇದೆಯೇ?**

ಉ: ಇಲ್ಲ. ಹದಿನಾಲ್ಕು ಲೋಕಗಳಿವೆ. ನಾವು ಏಳನೆಯ ಲೋಕದಲ್ಲಿದ್ದೇವೆ. ಈ ಏಳನೆಯ ಲೋಕದ ಕೆಳಗೆ ಕತ್ತಲಿನ ಲೋಕಗಳಿವೆ. ಅಲ್ಲಿ ಜೀವಿಸುವುದಕ್ಕಾಗಿಯೇ ವಿಶೇಷವಾಗಿ ಆತ್ಮಗಳನ್ನು ಸೃಷ್ಟಿಸಲಾಗಿದೆ. ಅವು ದುಷ್ಟ ಆತ್ಮಗಳು. ಜ್ಞಾನೋದಯ ಪಡೆದ ಆತ್ಮವೊಂದು ಎಂದಿಗೂ ದುಷ್ಟ ಆತ್ಮವಾಗುವುದಿಲ್ಲ. ಜ್ಞಾನೋದಯ ಪಡೆದ ಆತ್ಮವು ಸಹ ತಪ್ಪೆಸಗಬಹುದು, ಕೆಳಗೆ ಜಾರಬಹುದು ಎಂದು ತಾತ್ತ್ವಿಕವಾಗಿ ಹೇಳಬಹುದಾದರೂ, ವಾಸ್ತವದಲ್ಲಿ, ಒಮ್ಮೆ ಜ್ಞಾನೋದಯ ಹೊಂದಿದರೆ ಆ ವ್ಯಕ್ತಿಯು ಕೆಳ ಜಾರುವುದಿಲ್ಲ.


**ಪ್ರ: ನಾನು ಕಂಪ್ಯೂಟರ್ ಪ್ರೋಗ್ರಾಮಿಂಗ್ ಮಾಸ್ಟರ್ ಆಗಬೇಕೆಂದಿದ್ದೇನೆ. ಇದು ನನ್ನ ಸಾಧನೆಗೆ ಅಡ್ಡಿ ಪಡಿಸುತ್ತದೆಯೇ?**

ಉ: ಸಾಧನೆಯ ಹಾದಿಯಲ್ಲಿ ನಮ್ಮನ್ನು ಬಿಟ್ಟು ಬೇರೆ ಯಾವುದೂ ಅಡ್ಡಿ ಪಡಿಸುವುದಿಲ್ಲ. ನೀವು ನಿಜವಾಗಿ ಧ್ಯಾನ ಮಾಡಬಯಸಿದರೆ, ಬೆಳೆಯುವುದನ್ನು ಬಿಡದೆ ಪ್ರಯತ್ನಿಸಿದರೆ, ನೀವು ಅವುಗಳನ್ನು ಸಾಧಿಸುತ್ತೀರಿ. ನಿಮ್ಮಲ್ಲಿ ತೀವ್ರತೆಯಿಲ್ಲದಿದ್ದರೆ, ಸಮರ್ಥನೆಗೆ ನೀವು ಕಾರಣಗಳನ್ನು ಹುಡುಕುತ್ತೀರಿ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

RNI. No. KARKAN/2003/13739 Registered Postal Regn. No. KRNA/BGE-1124/2014-2016
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಜನರ ಬಗೆಗಿನ ನನ್ನ ಅಭಿಪ್ರಾಯ ಅನೇಕ ಸಲ ತಪ್ಪಾಗಿದ್ದುದರಿಂದ, ಅವರ ಬಗ್ಗೆ ಯಾವುದೇ ತೀರ್ಮಾನಕ್ಕೆ ಬರಬಾರದೆಂದು ನಾನೀಗ ಅರಿತಿದ್ದೇನೆ. ಆತ್ಮವಿಮರ್ಶೆ ಮಾಡಿಕೊಂಡು, ಬೆಳಕಿನೆಡೆಗೆ ತಿರುಗುವುದು ನನಗೆ ಈಗ ಸುಲಭವಾಗಿದೆ ಮತ್ತು ಅದರ ಸಹಾಯ ಕೂಡಾ ದೊರೆಯುತ್ತದೆ. ನನಗೆ ಋಷಿಗಳಲ್ಲಿ ಅತ್ಯಂತ ಭರವಸೆ ಇದೆ. ಅವರ ಸಹಾಯಕ್ಕಾಗಿ ನಾನು ಅತ್ಯಂತ ಋಣಿಯಾಗಿದ್ದೇನೆ.

– ನಂದಿತಾ ವಿಜಯನ್

ಮಾಲ್ ಒಂದರಲ್ಲಿ ಇತ್ತೀಚೆಗೆ ಪಾಸ್‌ಪೋರ್ಟ್ ಹಾಗೂ ಒಡವೆಗಳಿದ್ದ ನನ್ನ ಕೈಚೀಲ ಕಳೆದು ಹೋಗಿತ್ತು. ನಾನು ಬೆಳಕನ್ನು ಬೇಡಿಕೊಂಡೆ, ತಕ್ಷಣ ಅಲ್ಲಿನ ಕಾವಲುಗಾರ ನಿಮ್ಮ ಆ ಕೈಚೀಲ ಸುರಕ್ಷಿತವಾಗಿದೆ ಎಂದು ತಿಳಿಸಿದ. ಬೆಳಕಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಈಗ ನಾನು ಪ್ರತಿಯೊಂದಕ್ಕೂ ಬೆಳಕನ್ನೇ ನಂಬಿದ್ದೇನೆ ಮತ್ತು ಅದು ನನ್ನೊಡನೆ ಯಾವಾಗಲೂ ಇರುತ್ತದೆಂಬ ವಿಶ್ವಾಸ ನನಗಿದೆ.

– ಅನಿಲಾ ಲಂಕದಾಸು

ಮೂಳೆ ಮುರಿದಿದ್ದ, ಊದಿಕೊಂಡಿದ್ದ, ಬಿಗಿಯಾಗಿದ್ದ ನನ್ನ ಬೆರಳು ಜಜ್ಜಿ ಹೋಗಿ ಆರು ತಿಂಗಳಿನಿಂದ ಅತ್ಯಂತ ನೋವನ್ನು ಕೊಡುತ್ತಿತ್ತು. ನನ್ನ ಕೇವಲ ಒಂದೇ ದಿನದ ಧ್ಯಾನದಿಂದ ಅದು ನೋವು ರಹಿತವಾಗಿ, ಊತ ಗಣನೀಯವಾಗಿ ಕಡಿಮೆಯಾಗಿ ಬೆರಳಾಡಿಸಲು ಸಾಧ್ಯವಾಯಿತು.

ಧ್ಯಾನದ ನಂತರ ನನಗೆ ರಾತ್ರಿ ಗಾಢನಿದ್ದೆಯ ಅನುಭವವಾಗಿ, ನನ್ನೆಲ್ಲಾ ಚೈತನ್ಯ ಒಟ್ಟುಗೂಡಿ ಪುನಶ್ಚೇತನಗೊಂಡು, ನಾನು ದೈಹಿಕವಾಗಿ ಕಷ್ಟದ ಕೆಲಸವನ್ನು ಮಾಡಲು ಸಾಧ್ಯವಾಗಿದೆ ಹಾಗೂ ನಾನು ಶಾಂತ ಮನಸ್ಸಿನಿಂದ ಆಲೋಚನೆ ಮಾಡಲು ಸಾಧ್ಯವಾಗಿದೆ. ದಿನದ ಕೊನೆಯಲ್ಲಿ ಮೊದಲಿನಂತೆ ಶಕ್ತಿಗುಂದದೆ ಉತ್ಸಾಹದಿಂದಿರಲು ಸಾಧ್ಯವಾಗಿದೆ.

– ಲ್ಯುಸಿಂಡಾ ಬಾಚ್

ಅಮೇರಿಕದಲ್ಲಿದ್ದಾಗ, ಹೆಚ್ಚಿನ ಎಲ್ಲಾಸಮಯದಲ್ಲಿ ನನ್ನಷ್ಟಕ್ಕೇ ನಾನಿರುತ್ತಿದ್ದೆ. ನಾನು ಈ ಅವಕಾಶವನ್ನು ಪುಸ್ತಕಗಳನ್ನು ಓದುವುದರಲ್ಲಿ, ಆಧ್ಯಾತ್ಮಿಕ ಸಾಧನೆಯಲ್ಲಿ ಹಾಗೂ ತಪ್ಪಿರುವ ಭಾನುವಾರದ ತರಗತಿಗಳನ್ನು ನೋಡುವುದರಲ್ಲಿ ಸದುಪಯೋಗಪಡಿಸಿಕೊಂಡೆ. ಈ ಹಿಂದೆ ನಾನು ಯೋಚಿಸದೇ ಇರುವಷ್ಟು ಮೌನವಾಗಿರಬಲ್ಲೆ ಎಂದು ತಿಳಿದು ನನ್ನ ಬಗ್ಗೆ ನನಗೇ ಆಶ್ಚರ್ಯವಾಯಿತು! ಈಗ ನನ್ನಲ್ಲಿ ಕಂಡು ಬಂದಂತಹ ಅಪಾರವಾದ ಸ್ಥಿರತೆ ಹಾಗೂ ವಿಸ್ತಾರವಾದ ಅನುಭವವು ನನ್ನ ಶಂಬಲ ಧ್ಯಾನ ಹಾಗೂ ಬೆಳಕಿನ ಸಂಚಲನದಲ್ಲೂ ಕಂಡು ಬರುತ್ತಿದೆ ಮತ್ತು ಇದು ನನಗೆ ಹೊಸತು.

– ನಂದಿತಾ ಪಟೇಲ್

ಧ್ಯಾನಕ್ಕೆ ಸೇರಿದ ನಂತರ, ನಾನು ಅತ್ಯಂತ ಪ್ರಶಾಂತಳಾಗಿದ್ದೇನೆ ಮತ್ತು ನನ್ನ ಶಾಲಾಭ್ಯಾಸ ಕೂಡಾ ಚೆನ್ನಾಗಿ ಸಾಗುತ್ತಿದೆ. ನನ್ನ ಜೀವನದಲ್ಲಿ, ಅನಿರೀಕ್ಷಿತ ತಿರುವುಗಳು ತುಂಬಾ ಬರುತ್ತಿವೆ. ಒಂದು ದಿನ ನನಗೆ ಧ್ಯಾನ ಮಾಡಲಾಗಲಿಲ್ಲ. ಆಗ ನಾನು ಸಪ್ತಋಷಿಗಳಿಗೆ ಸಹಾಯ ಮಾಡಲು ಪ್ರಾರ್ಥಿಸಿದೆ. ನಂತರ ನನಗೆ ಧ್ಯಾನ ಮಾಡಲು ಸಾಧ್ಯವಾಯಿತು. ಕೆಲವು ಸಮಯದ ಹಿಂದೆ ನನಗೆ ಹಣಕಾಸಿನ ತೊಂದರೆಯಾಗಿದ್ದು, ನಾನು ಪುನಃ ಸಪ್ತಋಷಿಗಳನ್ನು ಪ್ರಾರ್ಥಿಸಿದೆ ನಂತರ ನನ್ನೆಲ್ಲಾ ಸಮಸ್ಯೆಗಳು ಕಣ್ಮರೆಯಾದವು.

– ಲೀಲಾವತಿ ವಿ.

ನಮ್ಮ ಒಂದು ಹೊರ ದೇಶದ ಪ್ರವಾಸದ ಸಂದರ್ಭದಲ್ಲಿ, ದುಬೈನಲ್ಲಿ ವಲಸೆ ಕಾರ್ಯವಿಧಾನಗಳನ್ನು ಪರಿಶೀಲಿಸುವಾಗ ಅಲ್ಲಿನ ಅಧಿಕಾರಿ ನಮ್ಮೊಡನೆ ಸಹಕರಿಸದೆ ಬಹಳ ಒರಟಾಗಿ ವರ್ತಿಸಿದರು. ತಕ್ಷಣ ನಾನು ಗುರೂಜಿಯವರ ಸಹಾಯವನ್ನು ಕೋರಿದೆ ಆಗ ಎಲ್ಲ ಕಾರ್ಯವಿಧಾನಗಳೂ ಸಂಪೂರ್ಣವಾದವು. ಗುರೂಜಿಯವರ ಸಹಾಯ ದೊರೆಯದಿದ್ದರೆ ನಾವು ವಿಮಾನವನ್ನು ತಪ್ಪಿಸಿಕೊಳ್ಳಬೇಕಿತ್ತು. ಅದಕ್ಕಾಗಿ ನಾವು ಅತ್ಯಂತ ಋಣಿಯಾಗಿದ್ದೇವೆ. ಇದರಂತೆ ಸಮಸ್ಯೆಗಳು ಸರಾಗವಾಗಿ ಪರಿಹಾರವಾದ ಎಣಿಸಲಾರದಷ್ಟು ಅನುಭವಗಳು ನನಗಾಗಿವೆ.

ನಾನು ಪ್ರಸ್ತುತ ಕ್ಷಣಕ್ಕಾಗಿ ಬದುಕುವುದನ್ನು ಮುಂದುವರೆಸಿದ್ದೇನೆ. ನನ್ನ ಭವಿಷ್ಯಕ್ಕಾಗಿ ಯೋಚನೆ ಮಾಡುವುದನ್ನು ಬಿಟ್ಟಿದ್ದೇನೆ, ಏಕೆಂದರೆ ಗುರೂಜಿಯವರು ಎಂತಹ ಸಂದರ್ಭದಲ್ಲಿದ್ದರೂ ನನ್ನನ್ನು ರಕ್ಷಿಸುತ್ತಾರೆ ಎಂದು ನನಗೆ ತಿಳಿದಿದೆ. ಆದ್ದರಿಂದ ಈಗ ನಾನು ಅತ್ಯಂತ ಸಂತೋಷವಾಗಿದ್ದೇನೆ. ಈಗ ನಾನು ಯಾವುದೇ ನಕಾರಾತ್ಮಕ ಭಾವನೆಗಳನ್ನು ಹಾಗೂ ನನ್ನೆಡೆಗಿನ ನಕಾರಾತ್ಮಕ ಪದಗಳನ್ನು ನಿರ್ಲಕ್ಷಿಸಲು ಕಲಿತಿದ್ದೇನೆ. ಏಕೆಂದರೆ ನಾನು ಆ ವ್ಯಕ್ತಿಯಲ್ಲವೆಂದು ನನಗೆ ತಿಳಿದಿದೆ.

– ಆ್ಯನ್ ಚಾಪ್‌ಮನ್

ನಾನು ಒಂದು ಲೇಖನವನ್ನು ಬರೆಯುತ್ತಿದ್ದಾಗ ಅದು ಮಧ್ಯದಲ್ಲೇ ನಿಂತುಹೋಯಿತು. ನಾನು ಬೆಳಕನ್ನು ಸಂಪರ್ಕಿಸಿ ಅದರ ಸಹಾಯ ಬೇಡಿದೆ. ಮರುಕ್ಷಣವೇ ನನಗೆ ಏನು ಬರೆಯಬೇಕು ಹಾಗೂ ಹೇಗೆ ಬರೆಯಬೇಕೆಂಬ ಸೂಚನೆ ದೊರೆಯಿತು.

ಮಾನಸಕ್ಕೆ ನಾನು ಭೇಟಿ ನೀಡಿದಾಗ, ರಾ–ಧ್ಯಾನಮಂದಿರದಲ್ಲಿ ಕುಳಿತಿದ್ದೆ. ನಾನು ಅಲ್ಲಿ ಕುಳಿತಿರುವುದನ್ನು ನಾನೇ ಹೊರಗಿನಿಂದ ಕಾಣಬಹುದಾಗಿತ್ತು ಮತ್ತು ಧ್ಯಾನದ ಸಮಯದಲ್ಲಿ ನನ್ನನ್ನು ಯಾವುದೋ ನಕ್ಷತ್ರದ ಬಳಿಗೆ ಕರೆದುಕೊಂಡು ಹೋದರು.

ನಾನು ಯಾವಾಗಲೂ ಸಕಾರಾತ್ಮಕವಾಗಿರುತ್ತೇನೆ ಹಾಗೂ ಶಾಂತಿಯಿಂದಿರುತ್ತೇನೆ. ಬಹಳ ಅಪರೂಪವಾಗಿ ನಾನೇನಾದರೂ ವ್ಯಾಕುಲಗೊಂಡರೆ, ಋಷಿಗಳು ಹಾಗೂ ಗುರೂಜಿಯವರು ನನ್ನ ರಕ್ಷಣೆಗೆ ಬರುವರೆಂಬುದು ತಿಳಿದಿದೆ. ನನಗೀಗ ಜೀವನದಲ್ಲಿ ತೃಪ್ತಿಯಿದೆ ನಾನು ಗುರೂಜಿಯವರನ್ನು ಪಡೆದದ್ದಕ್ಕೆ ಯಾವಾಗಲೂ ಅತ್ಯಂತ ಕೃತಜ್ಞನಾಗಿದ್ದೇನೆ.

– ವಿನಮ್ರ ಲೊಂಗಾನಿ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ